27 March 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!


-ಸ್ನೇಹಾ ಆನಂದ್

info.varthaman@gmail.com



ಮೈಸೂರಿನಲ್ಲಿ ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ ಕಾರ್ಯಕ್ರಮ — ಪುಟ ಸಂ. 2


ಚಾಮರಾಜನಗರ ಒಳಮೀಸಲಾತಿ ಜಾರಿಗಾಗಿ ಪ್ರತಿಭಟನೆ — ಪುಟ ಸಂ. 3



ನಾಳೆ ರಾಮನಗರದಲ್ಲಿ ಶ್ರೀ ರಾಮ ಮಹಾರಥೋತ್ಸವ — ಪುಟ ಸಂ. 4


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 132 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಿಎಂ ಸಿದ್ದುಗೆ ಮತ್ತೆ ಸಂಕಷ್ಟ

## ಮುಡಾ ಹಗರಣ: ಸಿದ್ದರಾಮಯ್ಯ ಕುಟುಂಬಕ್ಕೆ ಹೈಕೋರ್ಟ್ ನೋಟಿಸ್



**ಬೆಂಗಳೂರು:** ಮುಡಾ ಸೈಟು ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪತ್ನಿ ಪಾರ್ವತಿ ಅವರಿಗೆ ಕರ್ನಾಟಕ ಹೈಕೋರ್ಟ್ ತುರ್ತು ನೋಟಿಸ್ ಜಾರಿ ಮಾಡಿದೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ನೀಡಿದ್ದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಮುಡಾ ಹಗರಣದ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ದೂರನ್ನಾಧರಿಸಿ ಹೈಕೋರ್ಟ್ ಪ್ರತಿವಾದಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಲೋಕಾಯುಕ್ತ ಪೊಲೀಸರು, ಜಾರಿ ನಿರ್ದೇಶನಾಲಯ, ಇತರ ಆರೋಪಿಗಳಾದ ಮಲ್ಲಿಕಾರ್ಜುನ ಸ್ವಾಮಿ, ದೇವರಾಜು ಅವರಿಗೂ ಕೋರ್ಟ್ ತುರ್ತು ನೋಟಿಸ್ ಜಾರಿಗೊಳಿಸಿದೆ.

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ನೀಡಿದ್ದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸಿತ್ತು. ಹಗರಣದ ಆರೋಪಿಗಳಾಗಿದ್ದ ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ, ದೇವರಾಜು ಅವರನ್ನ ದೋಷಮುಕ್ತಗೊಳಿಸಿತ್ತು. ಉಳಿದ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸುವಂತೆ ಕೋರ್ಟ್ ಆದೇಶ ನೀಡಿತ್ತು.

## 265ಕ್ಕೆ ಟವರ್‌ಗೆ ಮುಡಾ ಅನುಮತಿ: ಮಾಜಿ ಆಯುಕ್ತ ದಿನೇಶ್ ಎಡವಟ್ಟು



**ಮೈಸೂರು:** ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಜಯನಗರ ಮೊದಲನೇ ಹಂತದಲ್ಲಿರುವ ವಾಣಿಜ್ಯ ಸಂಕೀರ್ಣದ ಮೇಲೆ ಮೊಬೈಲ್ ಟವರ್ ಅಳವಡಿಸಲು ತಿಂಗಳಿಗೆ ಕೇವಲ 265 ರೂ. ಬಾಡಿಗೆ ನಿಗದಿಪಡಿಸಿ ಖಾಸಗಿ ಕಂಪನಿಗೆ ಅನುಮತಿ ನೀಡಿರುವ ಮತ್ತೊಂದು ಹಗರಣ ಬೆಳಕಿಗೆ ಬಂದಿದೆ.

ಈ ಸಂಬಂಧ ಯಾವುದೇ ಒಪ್ಪಂದ ಅಥವಾ ದಾಖಲೆ ಮುಡಾದಲ್ಲಿ ಲಭ್ಯವಿಲ್ಲ. ಕೇವಲ ಒಂದು ಮನವಿ ಪತ್ರಕ್ಕೆ ಸ್ಪಂದಿಸಿದ ಅಂದಿನ ಆಯುಕ್ತ ದಿನೇಶ್ ಕುಮಾರ್ ಯಾವುದೇ ಷರತ್ತು ಪುಟ 2ಕ್ಕೆ

## ಇಂದು ಎಲ್ಲಾ ಸಿಎಂಗಳ ಜೊತೆ ಮೋದಿ ಸಂವಾದ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಉಂಟಾಗಿರುವ ಸಮಸ್ಯೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮಾ.27 ರಂದು ಸಂಜೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸುವರು. ರಾಜ್ಯಗಳ ಸಿದ್ಧತೆ ಮತ್ತು ಯೋಜನೆಗಳನ್ನು ಪರಿಶೀಲಿಸಲಾಗುತ್ತದೆ.

ಎಲ್ಲಾ ಸಿಎಂಗಳ ಜೊತೆಗೆ ಪ್ರಧಾನಿ ನಡೆಸುವ ಸಭೆಯಲ್ಲಿ ಕರ್ನಾಟಕದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಭಾಗವಹಿಸುವರೇ ಎಂಬುದು ತೀವ್ರ ಕುತೂಹಲ ಕೆರಳಿಸಿದೆ. ಈ ಕುರಿತು ಮುಖ್ಯಮಂತ್ರಿ ಕಚೇರಿಯಿಂದ ಇದು ವರೆಗೆ ಯಾವುದೇ ಅಧಿಕೃತ ಪ್ರಕಟಣೆ ಬಂದಿಲ್ಲ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಹೊರತಾಗಿಯೂ ದೇಶಾದ್ಯಂತ ಇಂಧನ ಪೂರೈಕೆ ಸ್ಥಿರವಾಗಿದೆ ಮತ್ತು ಚಿಲ್ಲರೆ ಇಂಧನ ಮಳಿಗೆಗಳು ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತಿವೆ. ವದಂತಿಗಳಿಗೆ ಕಿವಿಗೂಡ ಬೇಡಿ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಮತ್ತೆರಡು ಹುಲಿ ಪತ್ತೆ

**ಚಾಮರಾಜನಗರ:** ಗುಂಡ್ಲುಪೇಟೆ ತಾಲ್ಲೂಕಿನ ಚೆನ್ನಮಲ್ಲಿಪುರ ಗ್ರಾಮದ ರೈತರ ಜಮೀನಿನ ಬಾಳೆತೋಟ ಹಾಗೂ ಆಸುಪಾಸಿನಲ್ಲಿ ಮರಿಯೊಟ್ಟಿಗೆ ತಾಯಿ ಹುಲಿ ವಾಸ್ತವ್ಯ ಹೂಡಿರುವುದು ಸುತ್ತಮುತ್ತಲಿನ ಗ್ರಾಮಗಳ ರೈತರಲ್ಲಿ ಆತಂಕ ಸೃಷ್ಟಿಯಾಗಿದೆ. ಹುಲಿಗಳ ಚಲನವಲನದ ಮೇಲೆ ಅರಣ್ಯ ಇಲಾಖೆ ಡ್ರೋನ್ ಕ್ಯಾಮೆರಾ ಮೂಲಕ ನಿಗಾ ವಹಿಸಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ಅರಣ್ಯ ವಲಯ ವ್ಯಾಪ್ತಿಯ ಚೆನ್ನಮಲ್ಲಿಪುರ ಗ್ರಾಮದ ರೈತ ನಾಗಪ್ಪ ಎಂಬವರ ಜಮೀನಿನಲ್ಲಿ ಕಳೆದ ಮೂರು ಪುಟ 2ಕ್ಕೆ

## ಶಾಲಾ ಪ್ರವೇಶಕ್ಕೆ 2 ತಿಂಗಳು ವಿನಾಯಿತಿ

### 1ನೇ ತರಗತಿ, ಎಲ್‌ಕೆಜಿ, ಯುಕೆಜಿಗೆ ಸಡಿಲಿಕೆ: ಸಚಿವ ಮಧು ಬಂಗಾರಪ್ಪ

**ಬೆಂಗಳೂರು:** ಒಂದನೇ ತರಗತಿ ದಾಖಲಾತಿಗೆ ಆರು ವರ್ಷ ತುಂಬಿರಬೇಕೆಂಬ ಕಡ್ಡಾಯ ನಿಯಮದಲ್ಲಿ ಸರ್ಕಾರ ಈ ವರ್ಷವೂ 60 ದಿನಗಳ ವಿನಾಯಿತಿ ನೀಡಿ ಮಹತ್ವದ ತೀರ್ಮಾನ ಕೈಗೊಂಡಿದೆ.

ವಿಧಾನಸಭೆಯಲ್ಲಿ ಸೋಮವಾರ ಈ ಸಂಬಂಧ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಹತ್ವದ ಘೋಷಣೆ ಮಾಡಿದರು. ಒಂದನೇ ತರಗತಿಗೆ ದಾಖಲಾಗಲು ಆರು ವರ್ಷ ತುಂಬಿರಬೇಕೆಂಬ ನಿಯಮದಲ್ಲಿ 2026–27ನೇ ವರ್ಷದ ಶೈಕ್ಷಣಿಕ ವರ್ಷದಲ್ಲಿ 60 ದಿನಗಳ ಸಡಿಲಿಕೆ ಕೊಡುವ ತೀರ್ಮಾನ ಮಾಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಈ ನಿರ್ಧಾರದಿಂದ 5 ವರ್ಷ 10 ತಿಂಗಳು ಅಥವಾ ಅದರ ಮೇಲ್ಪಟ್ಟು ವಯಸ್ಸಾಗಿರುವ ಮಕ್ಕಳೂ ಸಹ ಈ ವರ್ಷ ಒಂದನೇ ತರಗತಿಗೆ ದಾಖಲಾಗಬಹುದು. ಈ ಸಡಿಲಿಕೆ ಎಲ್‌ಕೆಜಿ, ಯುಕೆಜಿ, ಒಂದನೇ ತರಗತಿಗೆ ಅನ್ವಯವಾಗಲಿದೆ.

ಮಕ್ಕಳ ಪೋಷಕರು ವಯೋಮಿತಿ ಸಡಿಲಿಕೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದರು. ಸಿಎಂ, ಡಿಸಿಎಂ, ಶಿಕ್ಷಣ ಸಚಿವರ ಮನೆಗಳಿಗೆ ಪದೇಪದೇ ಹೋಗಿ ಒತ್ತಾಯ ಮಾಡುತ್ತಿದ್ದರು. ಈಗ ಸರ್ಕಾರದ ನಿರ್ಧಾರದಿಂದ ಈ ಮಕ್ಕಳ ಪೋಷಕರು ನಿಟ್ಟುಸಿರು ಬಿಡುವಂತಾಗಿದೆ.

ಪ್ರತೀ ಬಾರಿಯೂ ಈ ಸಮಸ್ಯೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಹೊಸದಾಗಿ ಕಾನೂನು ತಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ನಿರ್ಧರಿಸಿದೆ. ಇದುವರೆಗೆ ಎಲ್‌ಕೆಜಿ, ಯುಕೆಜಿಗೆ ರೆಗ್ಯುಲೇಟರಿ ನಿಯಮ ಇರಲಿಲ್ಲ. ಇದಕ್ಕಾಗಿ ಹೊಸ ಕಾನೂನು ತಂದು ಎಲ್‌ಕೆಜಿ, ಯುಕೆಜಿಯಲ್ಲೇ ದಾಖಲಾತಿಗೆ ವಯೋಮಿತಿ ನಿಗದಿ ಮಾಡಿ ಸ್ಪಷ್ಟತೆ ಕೊಡಲಾಗುವುದು. ಮುಂದಿನ ಅಧಿವೇಶನದಲ್ಲಿ ಈ ಸಂಬಂಧ ಮಸೂದೆ ಮಂಡನೆ ಮಾಡಲಾಗುವುದು ಎಂದು ಬಂಗಾರಪ್ಪ ತಿಳಿಸಿದರು.



## ಮಾ.31ಕ್ಕೆ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಮುಂದೂಡಿಕೆ

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಯನ್ನು ಮಾ.30ರ ಬದಲಿಗೆ ಮಾ.31ಕ್ಕೆ ಮುಂದೂಡಿಕೆ ಮಾಡಲಾಗಿದೆ ಎಂದು ಪರೀಕ್ಷಾ ಬೋರ್ಡ್ ಮಾಹಿತಿ ನೀಡಿದೆ. ಮಹಾವೀರ ಜಯಂತಿ ರಜೆಯನ್ನು ಹಿಂದೂಡಿಕೆ ಮಾಡಿದ ಹಿನ್ನೆಲೆಯಲ್ಲಿ ಮಾ.30ಕ್ಕೆ ನಡೆಯಬೇಕಿದ್ದ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಹಿಂದಿ ಪರೀಕ್ಷೆಯನ್ನು ಮಾ.31ಕ್ಕೆ ಮುಂದೂಡಿಕೆ ಮಾಡಿದೆ.

ಈ ಮೊದಲು ಮಾ.31ಕ್ಕೆ ರಜೆಯಿದ್ದ ಹಿನ್ನೆಲೆ ಮಾ.30ಕ್ಕೆ ಹಿಂದಿ ಪರೀಕ್ಷೆ ನಿಗದಿಯಾಗಿತ್ತು. ಸರ್ಕಾರ ಪರಿಷ್ಕರಣೆ ಮಾಡಿ ಮಾ.31ರ ರಜೆಯನ್ನು ಮಾ.30ಕ್ಕೆ ಘೋಷಿಸಿದೆ. ಹೀಗಾಗಿ ಪರೀಕ್ಷಾ ದಿನಾಂಕವನ್ನು ಬದಲಿಸಿ ಮಾ.31ಕ್ಕೆ ನಡೆಸಲು ತೀರ್ಮಾನಿಸಿದೆ. ಮಹಾವೀರ ಜಯಂತಿ ರಜೆ ಹಿಂದೂಡಿಕೆ ಮಾಡಿದ ಹಿನ್ನೆಲೆ ಪುಟ 2ಕ್ಕೆ

## ಹಿಂದಿ ಪರೀಕ್ಷೆಗೆ ರಕ್ಷಣೆಗೆ ಮನವಿ

**ಬೆಂಗಳೂರು:** ಈ ಬಾರಿಯ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಯನ್ನ ರದ್ದು ಮಾಡುವಂತೆ ವಿವಿಧ ಕನ್ನಡ ಪರ ಸಂಘಟನೆಗಳು ಆಗ್ರಹಿಸಿವೆ. ಪರೀಕ್ಷಾ ಕೇಂದ್ರಗಳಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಿರುವುದರಿಂದ ಭದ್ರತೆ ಕಲ್ಪಿಸುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಪತ್ರ ಬರೆದಿದೆ.

ಮಾರ್ಚ್ 31ರಂದು ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ನಿಗದಿಯಾಗಿದೆ. ಆದರೆ ತೃತೀಯ ಭಾಷಾ ವಿಷಯ ಪರೀಕ್ಷಾ ದಿನದಂದು ಕೇಂದ್ರಗಳಿಗೆ ಮುತ್ತಿಗೆ ಹಾಕುವುದಾಗಿ ವಿವಿಧ ಕನ್ನಡಪರ, ದಲಿತ ಮತ್ತು ರೈತಪರ ಸಂಘಟನೆಗಳು ಎಚ್ಚರಿಕೆ ನೀಡಿವೆ. ಹಿಂದಿ ಪಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಲೂ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಆ ದಿನ ಹೆಚ್ಚಿನ ಪೊಲೀಸ್ ಭದ್ರತೆ ನೀಡುವಂತೆ ಡಿಸಿ ಹಾಗೂ ಎಸ್ಪಿಗಳಿಗೆ ಮನವಿ ಸಲ್ಲಿಸುವಂತೆ ಪರೀಕ್ಷಾ ಮಂಡಲಿ ಎಲ್ಲಾ ಡಿಡಿಪಿಐಗಳಿಗೆ ಪತ್ರ ಬರೆದಿದೆ.

## 12 ಮಂದಿ ಸಜೀವ ದಹನ

### ಟಿಪ್ಪರ್‌ಗೆ ಖಾಸಗಿ ಬಸ್ ಡಿಕ್ಕಿ | ಹೊತ್ತಿ ಉರಿದ ಬಸ್




**ಅಮರಾವತಿ:** ಟಿಪ್ಪರ್‌ಗೆ ಖಾಸಗಿ ಬಸ್ ಡಿಕ್ಕಿಯಾಗಿ ಹೊತ್ತಿ ಉರಿದ ಪರಿಣಾಮ ಬಸ್ ನಲ್ಲಿದ್ದ ಕನಿಷ್ಠ 12 ಪ್ರಯಾಣಿಕರು ಸಜೀವ ದಹನವಾಗಿದ್ದಾರೆ. 20 ಜನರು ಗಾಯಗೊಂಡಿರುವ ದುರ್ಘಟನೆ ಆಂಧ್ರಪ್ರದೇಶದ ಮಾರ್ಕಪುರಂ ಜಿಲ್ಲೆಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಹರಿಕೃಷ್ಣ ಟ್ರಾವೆಲ್ಸ್‌ಗೆ ಸೇರಿದ ಖಾಸಗಿ ಬಸ್ ರಾಯವರಂ ಬಳಿ ಜಲ್ಲಿ ತುಂಬಿದ್ದ ಟಿಪ್ಪರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ತೀವ್ರತೆಗೆ ಬಸ್ ಹೊತ್ತಿ ಉರಿದಿದೆ. ಬೆಂಕಿ ಕೆನ್ನಾಲಿಗೆಗೆ 12 ಮಂದಿ ಸಜೀವ ದಹನವಾಗಿದ್ದಾರೆ. ಪೊಲೀಸರು ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನ ರಕ್ಷಣೆ ಮಾಡಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬಸ್ ತೆಲಂಗಾಣದ ನಿರ್ಮಲ್ ನಿಂದ ಆಂಧ್ರಪ್ರದೇಶದ ನೆಲ್ಲೂರಿಗೆ ಪ್ರಯಾಣಿಸುತ್ತಿತ್ತು. ಬಸ್ ಟಿಪ್ಪರ್‌ಗೆ ಡಿಕ್ಕಿ ಹೊಡೆದ ತೀವ್ರತೆ ಎಷ್ಟಿತ್ತೆಂದರೆ ತಪ್ಪಿಸಿಕೊಳ್ಳಲು ಅವಕಾಶವೇ ಇರಲಿಲ್ಲ. ಇಡೀ ಬಸ್ ಕ್ಷಣಾರ್ಧದಲ್ಲಿ ಬೂದಿಯಾ ಯಿತು ಎಂದು ಪುಟ 2ಕ್ಕೆ

## ನಾಳೆಯಿಂದ ಐಪಿಎಲ್ ಕ್ರಿಕೆಟ್

**ಬೆಂಗಳೂರು:** ಐಪಿಎಲ್ ಕ್ರಿಕೆಟ್ ಆವೃತ್ತಿ ಮಾ.28ರಿಂದ ಆರಂಭವಾಗುತ್ತಿದೆ. ನಗರದ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 28ರಂದು ಪಂದ್ಯ ಉದ್ಘಾಟನೆ ಆಗಲಿದೆ. ಹೀಗಾಗಿ ಸುತ್ತಮುತ್ತ ನೋ ಪಾರ್ಕಿಂಗ್ ಇರಲಿದೆ. ಕೆಲವೆಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.




ಕಳೆದ ವರ್ಷ ಜೂ.4ರಂದು ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಸಂಭವಿಸಿತ್ತು. ಹೀಗಾಗಿ ಈ ಬಾರಿ ಯಾವುದೇ ಲೋಪಗಳಾಗದಂತೆ ಪೊಲೀಸ್ ಇಲಾಖೆ ಹಾಗೂ ಸಂಚಾರಿ ಪೊಲೀಸರು ಕೆಲವು ಭದ್ರತಾ ಕ್ರಮಗಳನ್ನು ಕೈಗೊಂಡಿದೆ. ಮೊದಲ ಐಪಿಎಲ್ ಪಂದ್ಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಆರ್‌ಸಿಬಿ ಹಾಗೂ ಎಸ್‌ಆರ್‌ಹೆಚ್ ಮುಖಾಮುಖಿಯಾಗಲಿವೆ.

ಚಿನ್ನಸ್ವಾಮಿ ಸ್ಟೇಡಿಯಂ ಸುತ್ತಮುತ್ತ ಸಂಚಾರಿ ಪೊಲೀಸರು ಅಲರ್ಟ್ ಘೋಷಿಸಿದ್ದಾರೆ. ಟ್ರಾಫಿಕ್ ತಡೆಗಟ್ಟಲು ಹಲವು ಕ್ರಮ ಕೈಗೊಂಡಿದ್ದಾರೆ. ಪುಟ 2ಕ್ಕೆ

## ನಮಗೂ ಕ್ರಿಕೆಟ್ ಟಿಕೆಟ್ ಕೊಡಿ!

### ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಶಾಸಕರ ಒತ್ತಾಯ



**ಬೆಂಗಳೂರು:** ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕ್ರಿಕೆಟ್ ಪಂದ್ಯಾವಳಿ ನಡೆಯುವಾಗ ಶಾಸಕರಿಗೆ ಕನಿಷ್ಠ 4ರಿಂದ 5 ಟಿಕೆಟ್ ಕೊಡಿಸಿ ಎಂದು ವಿಧಾನ ಸಭೆಯಲ್ಲಿ ಸೋಮವಾರ ಸದಸ್ಯರು ಪಕ್ಷಾತೀತವಾಗಿ ಆಗ್ರಹಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣ ಸಂಬಂಧ ನಡೆದ ಚರ್ಚೆ ವೇಳೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಮೊನ್ನೆ 11 ಜನ ಕಾಲ್ತುಳಿತದಲ್ಲಿ ಸತ್ತಿದ್ದಾರೆ. ಮತ್ತೊಂದು ಸ್ಟೇಡಿಯಂ ಬೇಡ. ಚಿನ್ನಸ್ವಾಮಿ ಸ್ಟೇಡಿಯಂ ಜಾಗ ನಮ್ಮದು. ಅಲ್ಲಿ ಕ್ರಿಕೆಟ್ ಟ್ರೈನಿಂಗ್ ಮಾಡಿ ಎಂದು ಜಾಗ ನೀಡಿದ್ದೇವೆ. ಪುಟ 2ಕ್ಕೆ

## ಬೀದರ್: ಪೆಟ್ರೋಲ್ ಬಂಕ್ ಬಂದ್

**ಬೀದರ್:** ಇರಾನ್ ಮತ್ತು ಇಸ್ರೇಲ್ ವಾರ್ ಯುದ್ಧದ ಪರಿಣಾಮ ಗಡಿ ಜಿಲ್ಲೆ ಬೀದರ್‌ನ ಕೆಲವು ಬಂಕ್‌ಗಳಲ್ಲಿ ಪೆಟ್ರೋಲ್ ಅಭಾವ ಸೃಷ್ಟಿಯಾಗಿ ಬಂಕ್‌ಗಳು ಬಂದ್ ಆಗಿವೆ.

ತೈಲ ಕೊರತೆ ವದಂತಿ ಹಿನ್ನೆಲೆ ಜನ ಮುಗಿಬಿದ್ದು ಪೆಟ್ರೋಲ್, ಡೀಸೆಲ್ ಖರೀದಿಸಿದ ಹಿನ್ನೆಲೆಯಲ್ಲಿ ಬೀದರ್ ನಗರದ ಬಸವೇಶ್ವರ ವೃತದ ಬಳಿ ಇರುವ ನಯಾರಾ ಪೆಟ್ರೋಲ್ ಬಂಕ್ ಸೇರಿದಂತೆ 7ಕ್ಕೂ ಅಧಿಕ ಬಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಖಾಲಿಯಾಗಿ ಬಂಕ್‌ಗಳನ್ನು ಬಂದ್ ಮಾಡಲಾಗಿದೆ. ಬುಧವಾರ ರಾತ್ರಿಯಿಂದಲೇ ಪೆಟ್ರೋಲ್, ಡೀಸೆಲ್ ಖಾಲಿಯಾಗಿದೆ. ಸ್ಟಾಕ್ ಇಲ್ಲದೇ ಜನರು ಪೆಟ್ರೋಲ್ ಬಂಕ್‌ಗೆ ಬಂದು ಹಿಡಿಶಾಪ ಹಾಕುತ್ತಾ ವಾಪಸ್ ಹೋಗುತ್ತಿದ್ದಾರೆ.

## ಕಾಂಗ್ರೆಸ್‌ಗೆ ತಪ್ಪದ ಬಂಡಾಯದ ಬಿಸಿ

### ಸಾದಿಕ್ ಮನವೊಲಿಕೆಗೆ ತಡವಾಗಿ ಬಂದ ಕೈ ನಾಯಕರು ವಿಫಲ!



**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಅವರ ಮನವೊಲಿಸಲು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದ ಕಾಂಗ್ರೆಸ್ ನಿಯೋಗ ಗುರುವಾರ ನಡೆಸಿದ ಪ್ರಯತ್ನ ವಿಫಲವಾಯಿತು.

ನಾಮಪತ್ರ ಹಿಂಪಡೆಯುವ ಸಮಯ ಗುರುವಾರ ಮಧ್ಯಾಹ್ನ 3ಕ್ಕೆ ಮುಗಿಯಿತು. ಅವರೊಂದಿಗಿನ ಸಭೆ ಬಹುಹೊತ್ತಿನವರೆಗೂ ಮುಂದುವರೆಯಿತು.

ಮನೆಯ ಅಂಗಳದಲ್ಲಿ ಸಭೆ ನಡೆಸುತ್ತಿದ್ದ ಅಭ್ಯರ್ಥಿ ಬಳಿಗೆ ಬಂದ ಕಾಂಗ್ರೆಸ್ ನಿಯೋಗಕ್ಕೆ ಬೆಂಬಲಿಗರು ಗೋಬ್ಯಾಕ್ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಾಮಪತ್ರ ಹಿಂಪಡೆಯದಂತೆ ಸಾದಿಕ್ ಪೈಲ್ವಾನ್ ಅವರಿಗೆ ಒತ್ತಡ ಹೇರಿದರು.

ಸಭೆಯಿಂದ ಮನೆಯ ಒಳಗೆ ಕರೆದೊಯ್ದು ಗೋಪ್ಯ ಸಭೆ ನಡೆಸಿದರು. ಮಧ್ಯಾಹ್ನ 2.50ಕ್ಕೆ ಹೊರಬಂದ ನಿಯೋಗ ನಾಮಪತ್ರ ಹಿಂಪಡೆಯುವ ಸಮಯ ಮೀರಿದೆ. ಸಾದಿಕ್ ಪೈಲ್ವಾನ್ ಅವರು ಪಕ್ಷದೊಂದಿಗೆ ಇದ್ದಾರೆ. ಪರ್ಯಾಯ ಅವಕಾಶ ನೋಡುತ್ತಿದ್ದೇವೆ ಎಂದು ಪ್ರಕಟಿಸಿದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದ ನಿಯೋಗ ಸಂಧಾನಕ್ಕೆ ಬರಲಿದೆ ಎಂಬ ಮಾಹಿತಿ ಸಿಗುತ್ತಿದ್ದಂತೆ ಪೈಲ್ವಾನ್ ಬೆಂಬಲಿಗರು ಮನೆಯ ಬಳಿ ಜಮಾಯಿಸಿದ್ದರು. ಬೆಂಗಳೂರಿನಿಂದ ಸಲೀಂ ಅಹ್ಮದ್ ಹಾಗೂ ರಿಜ್ವಾನ್ ಅರ್ಷದ್ ನೇತೃತ್ವದ ನಿಯೋಗ ಮನೆಗೆ ಬರುವ ಹೊತ್ತಿಗೆ ಮಧ್ಯಾಹ್ನ 2.45 ಆಗಿತ್ತು. ಇದರಿಂದ ಮನೆಯ ಬಳಿ ಇಡೀ ದಿನ ಹೈಡ್ರಾಮಾ ನಡೆಯಿತು.

ಟಿಕೆಟ್ ಕೈತಪ್ಪಿದಾಗ ಇಂತಹ ಆಕ್ರೋಶ ಪುಟ 2ಕ್ಕೆ

## ನಾಳೆ ಮೈಸೂರಿನಲ್ಲಿ ಸಿಎಂ ಪ್ರವಾಸ



**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯಲ್ಲಿ ಮಾ.28 ಮತ್ತು 29ರಂದು ಪ್ರವಾಸ ಹಮ್ಮಿಕೊಂಡಿದ್ದಾರೆ. ಮಾರ್ಚ್ 28ರಂದು ಮಧ್ಯಾಹ್ನ 3:25ಕ್ಕೆ ಮೈಸೂರಿಗೆ ಆಗಮಿಸಲಿದ್ದಾರೆ. ಅಂದು ಸಂಜೆ 4ಕ್ಕೆ ಜೆಸಿ ಸ್ಪೋರ್ಟ್ಸ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನೂತನ ಕಟ್ಟಡ ಉದ್ಘಾಟನೆ ಮಾಡುವರು. ಸಂಜೆ 5 ಗಂಟೆಗೆ ಐಬಿಎಸ್ ಟ್ರಯಲ್ ಹೋಟೆಲ್ ಸಭಾಂಗಣದಲ್ಲಿ ಅವಳ ಸಾಧನೆ ಸಂಭ್ರಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ ಕವಾಯತು ಮೈದಾನದಲ್ಲಿ ಮಾರ್ಚ್ 29ರಂದು ಬೆಳಗ್ಗೆ 8 ಗಂಟೆಗೆ ಆಯೋಜಿಸಲಾಗಿರುವ 46ನೇ ತಂಡದ ಪೊಲೀಸ್ ಉಪನಿರೀಕ್ಷಕರು (ಸಿವಿಲ್) ಪುಟ 2ಕ್ಕೆ


## ಸೋನಿಯಾ ಗಾಂಧಿ ಆರೋಗ್ಯ ಸ್ಥಿತಿ ಸ್ಥಿರ



**ನವದೆಹಲಿ:** ಜ್ವರ ಮತ್ತು ಸೋಂಕು ಹಿನ್ನೆಲೆ ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಾಗಿದ್ದ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಆರೋಗ್ಯ ಸ್ಥಿರವಾಗಿದೆ. ಇನ್ನೂ ಕೆಲ ದಿನಗಳ ಕಾಲ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಲಾಗುವುದು ಎಂದು ಆಸ್ಪತ್ರೆ ಅಧ್ಯಕ್ಷ ಡಾ.ಅಜಯ್ ಸ್ವರೂಪ್ ಹೇಳಿದ್ದಾರೆ.

ಮಾರ್ಚ್ 24ರ ರಾತ್ರಿ ಸೋನಿಯಾ ಗಾಂಧಿ ಅವರನ್ನು ದೆಹಲಿಯ ಸರ್ ಗಂಗಾ ರಾಮ್ ಆಸ್ಪತ್ರೆಗೆ ಪುಟ 2ಕ್ಕೆ

## ಭಾರತ ಸೇರಿದಂತೆ ಮಿತ್ರ ರಾಷ್ಟ್ರಗಳಿಗೆ ಹಾರ್ಮುಜ್ ಓಪನ್



**ಟೆಹ್ರಾನ್:** ಇರಾನ್‌ನಿಂದ ಭಾರತಕ್ಕೆ ಗುಡ್‌ನ್ಯೂಸ್ ಸಿಕ್ಕಿದೆ. ಭಾರತ ಸೇರಿದಂತೆ ಮಿತ್ರ ರಾಷ್ಟ್ರಗಳ ಹಡುಗುಗಳು ಹಾರ್ಮುಜ್ ಜಲಸಂಧಿ ಮೂಲಕ ಸಾಗಲು ಇರಾನ್ ಅನುಮತಿ ನೀಡಿದೆ ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ತಿಳಿಸಿದ್ದಾರೆ.

ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನ ಸೇರಿದಂತೆ ಮಿತ್ರ ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸಾಗಲು ನಾವು ಅನುಮತಿ ನೀಡಿದ್ದೇವೆ ಎಂದು ಅರಘ್ಚಿ ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧ ಕೊನೆಗೊಳಿಸಲು 15 ಅಂಶಗಳನ್ನ ಪ್ರಸ್ತಾಪಿಸಿದ ಮರುದಿನವೇ ಈ ಬೆಳವಣಿಗೆ ನಡೆದಿದೆ.

ಶತ್ರು ರಾಷ್ಟ್ರಗಳಿಗೆ ಮಾತ್ರ ಮುಚ್ಚಲಾಗಿದೆ. ಶತ್ರು ರಾಷ್ಟ್ರದ ಹಡಗುಗಳು ಹಾದುಹೋಗಲು ಯಾವುದೇ ಕಾರಣಕ್ಕೂ ಅವಕಾಶ ಕೊಡಲ್ಲ ಎಂದು ಇರಾನ್‌ನ ಸಚಿವರು ಎಚ್ಚರಿಕೆ ನೀಡಿದ್ದಾರೆ. ಇಸ್ರೇಲ್ ಮತ್ತು ಅಮೆರಿಕ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ತೈಲ ಸಾಗಾಟ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನ ಇರಾನ್ ನಿರ್ಬಂಧಿಸಿತ್ತು. ಅಮೆರಿಕ 1 ತಿಂಗಳ ಕದನ ವಿರಾಮ ಘೋಷಿಸಿದ ಬಳಿಕ ಇರಾನ್ ಮಿತ್ರರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನ ಮುಕ್ತಗೊಳಿಸಿದೆ.

ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಯಲ್ಲಿ ವ್ಯತ್ಯಯಗಳು ಕಂಡುಬರುತ್ತಿದ್ದ ಹಿನ್ನೆಲೆ

## ಸುತ್ತೂರು ಮಠಕ್ಕೆ ಕೇಂದ್ರ ಸಚಿವ ಪ್ರಧಾನ್ ಭೇಟಿ



**ಮೈಸೂರು:** ಮೈಸೂರಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಭೇಟಿ ನೀಡಿದ್ದರು. ಈ ಸಂದರ್ಭ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಕೇಂದ್ರ ಸಚಿವರು ಬೆಳಗ್ಗೆ ಮಠದಲ್ಲಿ ಆಯೋಜಿಸಿದ್ದ ಉಪಹಾರವನ್ನು ಸವಿದರು. ಮಠದ ವತಿಯಿಂದ

## ಮತ್ತೊಂದು ಜಲಸಂಧಿಯೂ ಬಂದ್

### ಇಸ್ರೇಲ್ ಮತ್ತು ಅಮೆರಿಕಾಗೆ ಇರಾನ್ ಎಚ್ಚರಿಕೆ



**ಟೆಹ್ರಾನ್:** ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಕಿಡಿಕಾರಿರುವ ಇರಾನ್, ಬಾಲ ಬಿಚ್ಚಿದರೆ ಮತ್ತೊಂದು ಜಲಸಂಧಿಯನ್ನೂ ಮುಚ್ಚುತ್ತೇವೆ ಎಂದು ಇರಾನ್ ಎಚ್ಚರಿಕೆ ನೀಡಿದೆ.

ಅಮೆರಿಕ ಮತ್ತು ಇಸ್ರೇಲ್ ಸೇನಾ ಪಡೆಗಳು ಇರಾನ್ ಖಾರ್ಗ್ ಸೇರಿದಂತೆ ತನ್ನ ದ್ವೀಪಗಳ ಮೇಲೆ ದಾಳಿ ಮಾಡುವ ಮೂಲಕ ಯುದ್ಧವನ್ನು ತೀವ್ರಗೊಳಿಸಿದರೆ ಸೂಯೆಜ್ ಕಾಲುವೆಯ ಕಡೆಗೆ ಸಮುದ್ರ ಸಂಚಾರವನ್ನು ನಿಯಂತ್ರಿಸುವ ಕಿರಿದಾದ ಜಲಮಾರ್ಗವಾದ ಬಾಬ್ ಅಲ್–ಮಂಡೇಬ್ ಜಲಸಂಧಿ ನಿರ್ಬಂಧಿಸುವುದಾಗಿ ಇರಾನ್ ಬೆದರಿಕೆ ಹಾಕಿದೆ.

ಟೆಹ್ರಾನ್ ಈಗಾಗಲೇ ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಣಕ್ಕೆ ಪಡೆದಿದೆ. ಅದರ ಮೂಲಕ ವಿಶ್ವದ ಐದನೇ ಒಂದು ಭಾಗದಷ್ಟು ತೈಲವನ್ನು ಸಾಗಿಸಲಾಗುತ್ತದೆ. ಬಾಬ್ ಅಲ್–ಮಂಡೇಬ್‌ನಲ್ಲಿನ ಯಾವುದೇ ಅಡಚಣೆ ಮಧ್ಯಪ್ರಾಚ್ಯದಲ್ಲಿನ ಸಂಘರ್ಷದ ಆರ್ಥಿಕ ಪರಿಣಾಮವನ್ನು ಮತ್ತಷ್ಟು ಹೆಚ್ಚಿಸಬಹುದು ಎಂದು ಹೇಳಲಾಗಿದೆ.

ಜಾಗತಿಕ ಸಮುದ್ರದ ಮೂಲಕ ಸಾಗಿಸುವ ತೈಲದ ಸುಮಾರು 12 ಪ್ರತಿಶತ ಕೆಂಪು ಸಮುದ್ರ ಮತ್ತು ಅಡೆನ್ ಕೊಲ್ಲಿಯನ್ನು ಸಂಪರ್ಕಿಸುವ ಮಾರ್ಗದ ಮೂಲಕ ಹಾದುಹೋಗುತ್ತದೆ. ಇದು ವಿಶ್ವದ ನಾಲ್ಕನೇ ಅತಿದೊಡ್ಡ ಹಡಗು ಮಾರ್ಗವಾಗಿದೆ. ಇದು ಯೆಮೆನ್‌ನ ನೈಋತ್ಯ ಭಾಗದದಲ್ಲಿದೆ. ಅಲ್ಲಿ ಇರಾನ್ ಬೆಂಬಲಿತ ಹೌತಿ ಬಂಡುಕೋರರು ನೆಲೆಸಿದ್ದಾರೆ.

## ಮೊದಲ ಪುಟದಿಂದ

### 265ಕ್ಕೆ ಟವರ್‌ಗೆ ಮುಡಾ ಅನುಮತಿ: ಮಾಜಿ ಆಯುಕ್ತ ದಿನೇಶ್ ಎಡವಟ್ಟು

ವಿಧಿಸದೆ ಮಾಸಿಕ ಬಾಡಿಗೆ 265 ರೂ.ಗಳನ್ನ ಫಿಕ್ಸ್ ಮಾಡಿ ಕೊಟ್ಟಿದ್ದಾರೆ ಎನ್ನಲಾಗಿದೆ. ಖಾಸಗಿ ಸ್ಥಳದಲ್ಲಿ ಟವರ್ ಅಳವಡಿಸಲು ತಿಂಗಳಿಗೆ ಹತ್ತಾರು ಸಾವಿರ ರೂ. ಭರಿಸುವ ಖಾಸಗಿ ಸಂಸ್ಥೆಗೆ ಕೇವಲ 265 ರೂ.ಗೆ ನೀಡಿರುವುದ ಭಾರಿ ಅನುಮಾನಕ್ಕೆ ಕಾರಣವಾಗಿದೆ. ಈಗಾಗಲೇ ಅನುಮತಿ ನೀಡಿ ಎರಡು ವರ್ಷವಾಗಿದೆ. 2024ರಲ್ಲಿ 10 ವರ್ಷದ ಅವಧಿಗೆ ಅನುಮತಿ ನೀಡಲಾಗಿದೆ.

ಆದರೆ, ನಿಗದಿತ 265 ರೂ. ಬಾಡಿಗೆಯನ್ನು ಸಹ ಮುಡಾ ವಸೂಲಿ ಮಾಡುತ್ತಿಲ್ಲ. ಸಂಸ್ಥೆಯೂ ಸಹ ಬಾಡಿಗೆ ಪಾವತಿಸಿಲ್ಲ. ಈ ಸಂಬಂಧ ಎಂಡಿಎ ಹುಡುಕಾಡಿದರೂ ಯಾವುದೇ ದಾಖಲೆ ಲಭ್ಯವಿಲ್ಲ. ಈಗಾಗಲೇ 50–50 ಅನುಪಾತದ ವಿಚಾರದಲ್ಲಿ ಭಾರೀ ಹಗರಣದಲ್ಲಿ ಸಿಲುಕಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿರುವ ಎಂಡಿಎನಲ್ಲಿ ಎಡವಟ್ಟುಗಳು ಬೆಳಕಿಗೆ ಬರುತ್ತಲೇ ಇವೆ. ಈ ಸಂಬಂಧ ಈಗಿನ ಆಯುಕ್ತ ಕೆ.ಆರ್.ರಕ್ಷಿತ್ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

### ಭಾರತ ಸೇರಿದಂತೆ ಮಿತ್ರ ರಾಷ್ಟ್ರಗಳಿಗೆ ಹಾರ್ಮುಜ್ ಓಪನ್

ಹಾರ್ಮುಜ್ ಜಲಸಂಧಿಯನ್ನ ತೆರೆಯುವಂತೆ ಇರಾನ್‌ಗೆ ವಿಶ್ವಸಂಸ್ಥೆ ಕರೆ ನೀಡಿತ್ತು. ಯುಎನ್ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಈ ಬಗ್ಗೆ ಇರಾನ್‌ಗೆ ಹೇಳಿದ್ದರು.

### ಮತ್ತೆರಡು ಹುಲಿ ಪತ್ತೆ

ಡ್ರೋನ್ ಕ್ಯಾಮೆರಾ ಮೂಲಕ ನಿಗಾ ವಹಿಸಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ಅರಣ್ಯ ವಲಯ ವ್ಯಾಪ್ತಿಯ ಚೆನ್ನಮಲ್ಲಿಪುರ ಗ್ರಾಮದ ರೈತ ನಾಗಪ್ಪ ಎಂಬವರ ಜಮೀನಿನಲ್ಲಿ ಕಳೆದ ಮೂರು ದಿನದ ಹಿಂದೆ ಒಂದೂವರೆ ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದು ಮೈಸೂರಿನ ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿತ್ತು. ಇದಾದ ಬಳಿಕ ಮರಿಯೊಂದಿಗೆ ತಾಯಿ ಹುಲಿ ಓಡಾಟ ನಡೆಸುತ್ತಿರುವ ದೃಶ್ಯ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮದ್ದೂರು ವಲಯದಲ್ಲಿ ಪ್ರತ್ಯಕ್ಷವಾಗಿರುವ ತಾಯಿ ಹಾಗೂ ಮರಿ ಹುಲಿಗಳ ಸೆರೆಗೆ ಅರಣ್ಯ ಇಲಾಖೆ ಕೂಂಬಿಂಗ್ ನಡೆಸಲು ತೀರ್ಮಾನಿಸಿದೆ. ಕುಶಾಲನಗರದಿಂದ ಇಂದು ಸಾಕಾನೆಗಳು ಬರಲಿವೆ. ಮದ್ದೂರು ಹಾಗೂ ಮೂಲೆಹೊಳೆ ಅಧಿಕಾರಿಗಳು ಮತ್ತು ಸಿಬ್ಬಂದಿ ಬಾಳೆತೋಟದ ಸುತ್ತಮುತ್ತ ಬೀಡುಬಿಟ್ಟಿರುವ ಹುಲಿಗಳ ಚಲನವಲನದ ಮೇಲೆ ನಿಗಾ ವಹಿಸಲಿದ್ದಾರೆ ಎಂದು ಆರ್ ಎಫ್ ಓ ಪುನೀತ್ ತಿಳಿಸಿದ್ದಾರೆ.

### ಕಾಂಗ್ರೆಸ್‌ಗೆ ತಪ್ಪದ ಬಂಡಾಯದ ಬಿಸಿ

ಸಾಮಾನ್ಯ. ಪೈಲ್ವಾನ್ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದೇವೆ. ದಾವಣಗೆರೆಗೆ ಬರುವುದು ಕೊಂಚ ತಡವಾಯಿತು. ಮುಂದಿನ ದಿನಗಳಲ್ಲಿ ಅವರನ್ನು ವಿಶ್ವಾಸಕ್ಕೆ ಪಡೆಯುತ್ತೇವೆ. ಅವರು ಕಾಂಗ್ರೆಸ್‌ಗೆ ಶಕ್ತಿ ಆಗಲಿದ್ದಾರೆ ಎಂಬ ವಿಶ್ವಾಸ ಇದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ತಿಳಿಸಿದರು.

### ನಾಳೆ ಮೈಸೂರಿನಲ್ಲಿ ಸಿಎಂ ಪ್ರವಾಸ

ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

### ನಮಗೂ ಕ್ರಿಕೆಟ್ ಟಿಕೆಟ್ ಕೊಡಿ!

ಅವರು ಏನು ತರಬೇತಿ ನೀಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಒಂದು ಟಿಕೆಟ್‌ಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿ ಮುಂದೆ ಅಂಗಲಾಚುವ ಪರಿಸ್ಥಿತಿ ಇದೆ. ನಮ್ಮ ಹೆಸರಿನಲ್ಲಿರುವ ಟಿಕೆಟ್‌ಗಳನ್ನು ಮಾರಿಕೊಳ್ಳುತ್ತಾರೆ ಎಂದು ಅಶೋಕ್ ಆರೋಪಿಸಿದರು.

ಈ ವೇಳೆ ಮಾತಾಡಿದ ಕೈ ಶಾಸಕ ವಿಜಯಾನಂದ ಕಾಶಪ್ಪನವರ್, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ವೀಕ್ಷಕರ ಸಂಖ್ಯೆಯನ್ನು ಏರಿಸಿ. ಶಾಸಕರಿಗೆ ಒಂದೇ ಟಿಕೆಟ್ ಅದೂ ಕೆಳಗಡೆ ಗ್ಯಾಲರಿಯಲ್ಲಿ ಕೊಡುತ್ತಾರೆ. ಶಾಸಕರಿಗೆ ಕೂರಲು ಮೊದಲು ಸೂಕ್ತ ಅವಕಾಶ ಮಾಡಿಕೊಡಲಿ. ಹೊಸ ಸ್ಟೇಡಿಯಂ ಆಮೇಲೆ ಮಾಡಿ ಎಂದು ಆಗ್ರಹಿಸಿದರು.

### ಸುತ್ತೂರು ಮಠಕ್ಕೆ ಕೇಂದ್ರ ಸಚಿವ ಪ್ರಧಾನ್ ಭೇಟಿ

ಅವರಿಗೆ ಸನ್ಮಾನ ಮಾಡಲಾಯಿತು. ಕೆ.ಎಸ್.ಓ.ಯು.ನಲ್ಲಿ ನಡೆಯಲಿರುವ ಆರ್.ಎಸ್.ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿಮಿತ್ತ ಧರ್ಮೇಂದ್ರ ಪ್ರಧಾನ್ ಅವರು ಮೈಸೂರಿಗೆ ಆಗಮಿಸಿದ್ದಾರೆ. ಮಠಕ್ಕೆ ಭೇಟಿ ನೀಡಿದ ಬಳಿಕ ಅವರು ಕಾರ್ಯಕ್ರಮಕ್ಕೆ ತೆರಳಿದರು.

### 12 ಮಂದಿ ಸಜೀವ ದಹನ

ಪ್ರತ್ಯಕ್ಷದರ್ಶಿಗಳು ಹೇಳಿರುವುದಾಗಿ ತಿಳಿಸಿದ್ದಾರೆ. ಘಟನೆ ಬಗ್ಗೆ ಮಾಹಿತಿ ಪಡೆದ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಅವರು ಸಂತಾಪ ಸೂಚಿಸಿದ್ದಾರೆ. ಅಪಘಾತದ ಕಾರಣ ಕುರಿತು ಸಮಗ್ರ ತನಿಖೆ ನಡೆಸುವಂತೆ ಆದೇಶಿಸಿದ್ದಾರೆ.

### ನಾಳೆಯಿಂದ ಐಪಿಎಲ್ ಕ್ರಿಕೆಟ್

ಜೊತೆಗೆ ಸುಗಮ ಸಂಚಾರಕ್ಕಾಗಿ ವ್ಯವಸ್ಥೆ ಮಾಡಿದ್ದಾರೆ. ಪಂದ್ಯ ವೀಕ್ಷಿಸಲು ಬರುವವರಿಗೆ ಪಾರ್ಕಿಂಗ್‌ಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಓಲಾ, ಉಬರ್, ಆಟೋ ಇತ್ಯಾದಿ ಕ್ಯಾಬ್‌ಗಳು ಪಿಕ್‌ಪ್ ಮತ್ತು ಡ್ರಾಪ್ ಮಾಡಲು ಪ್ರತ್ಯೇಕ ಸ್ಥಳ ನಿಗದಿ ಮಾಡಲಾಗಿದೆ. ಸ್ಟೇಡಿಯಂ ಸುತ್ತಮುತ್ತ ಪಾರ್ಕಿಂಗ್ ಕೊರತೆಯಿರುವುದರಿಂದ ಬಿಎಂಟಿಸಿ, ಮೆಟ್ರೋ ಬಳಸಲು ಮನವಿ ಮಾಡಲಾಗಿದೆ.

### ಸೋನಿಯಾ ಗಾಂಧಿ ಆರೋಗ್ಯ ಸ್ಥಿತಿ ಸ್ಥಿರ

ದಾಖಲಿಸಲಾಗಿತ್ತು. ಸದ್ಯ ಅವರಿಗೆ ಆಂಟಿ ಬಯೋಟಿಕ್ ನೀಡಲಾಗುತ್ತಿದೆ. ಅವರು ಚಿಕಿತ್ಸೆಗೆ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿದ್ದಾರೆ ಎಂದು ಅಜಯ್ ತಿಳಿಸಿದ್ದಾರೆ. ಅವರ ಸ್ಥಿತಿ ಸ್ಥಿರವಾಗಿದ್ದು, ಯಾವುದೇ ಅಪಾಯವಿಲ್ಲ. ಹವಾಮಾನದಲ್ಲಿನ ಬದಲಾವಣೆಯಿಂದಾಗಿ ಅನಾರೋಗ್ಯಕ್ಕೆ ಒಳಗಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

### ಬೀದರ್: ಪೆಟ್ರೋಲ್ ಬಂಕ್ ಬಂದ್

ಮಂಗಳೂರಿನಿಂದ ಬರುವ ಪೆಟ್ರೋಲ್ ಮತ್ತು ಡಿಸೇಲ್ ಗಾಡಿ ಬಂದಿಲ್ಲ. ಹೀಗಾಗಿ ಬೀದರ್‌ನ ನಮ್ಮ ಬಂಕ್‌ನಲ್ಲಿ ಪೆಟ್ರೋಲ್, ಡಿಸೇಲ್ ಖಾಲಿಯಾಗಿದೆ. ಗಾಡಿ ಬಂದ ತಕ್ಷಣ ನಾವು ಪೆಟ್ರೋಲ್, ಡಿಸೇಲ್ ನೀಡುತ್ತೇವೆ ಎಂದು ಪೆಟ್ರೋಲ್ ಬಂಕ್ ಮಾಲೀಕರು ತಿಳಿಸಿದ್ದಾರೆ.

### ಹಿಂದಿ ಪರೀಕ್ಷೆ ಮುಂದೂಡಿಕೆ

ಪರೀ ಕ್ಷೆಯನ್ನು ಒಂದು ದಿನ ಮುಂದೂಡಿಕೆ ಮಾಡಲಾಗಿದೆ. ಮಾ.30ಕ್ಕೆ ಮಹಾವೀರ ಜಯಂತಿ ರಜೆ ಹಾಗೂ ಮಾ.31ಕ್ಕೆ ಹಿಂದಿ ಪರೀಕ್ಷೆ ನಡೆಯಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮಾಹಿತಿ ನೀಡಿದೆ.

## ಮಾ.28ಕ್ಕೆ ಮಹಿಳಾ ದಿನಾಚರಣೆ



ಮೈಸೂರು: ಬನ್ನಿಮಂಟಪದ ಮಹಿಳೋದಯ ಮಹಿಳಾ ಒಕ್ಕೂಟದವತಿಯಿಂದ ಈ ಬಾರಿ ಗಳಿಸಲು ಕೊಡುವುದು ವಿಷಯದೊಡನೆ ಮಾ.28 ರಂದು ವಿಶ್ವ ಮಹಿಳಾ ದಿನ ಆಚರಿಸಲಾಗುತ್ತಿದೆ ಎಂದು ಓಡಿಪಿ ನಿರ್ದೇಶಕ ರೆ.ಫಾ.ರಟೆನ್ನಿ ಕುರಿಯನ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 8.30ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಮಹಿಳೆಯರು ದ್ವಿಚಕ್ರ ವಾಹನ ಮತ್ತು ಆಟೋ ಚಾಲನೆ ಮಾಡುವ ರ?ಯಾಲಿ ಆಯೋಜಿಸಿದ್ದು, ಅದು ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜು ತಲುಪಲಿದೆ. ಅಲ್ಲಿ ಬೆಲಗ್ಗೆ 10.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಮೈಸೂರ ಧರ್ಮಾಧ್ಯಕ್ಷ ಡಾ. ಫ್ರಾನ್ಸಿಸ್ ಸೆರಾವೊ ಎಸ್‌ಜೆ ಅಧ್ಯಕ್ಷತೆ ವಹಿಸುವರು, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಉದ್ಘಾಟಿಸುವರು, ಬಿ.ಎಂ. ಸವಿತಾ, ಬಸವರಾಜು, ಉರ್ಮೇಶ್ ರೇವಂಕರ್, ಡಾ. ರಚನಾ ಮಹೇಶ್ ಇನ್ನಿತರರು ವೇದಿಕೆಯಲ್ಲಿರುವರೆಂದರು. ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರಗಳಿಂದ ಸುಮಾರು 2500 ಮಂದಿ ಮಹಿಳೆಯರು ಪಾಲ್ಗೊಳ್ಳಲಿದ್ದಾರೆ. ಇಲ್ಲಿ 10 ಮಂದಿ ಸಾಧಕಿಯರಿಗೆ ಪ್ರೇರಣಾ ಪತ್ರ ವಿತರಿಸಲಾಗುವುದು. ಜೊತೆಗೆ ಮಹಿಳೆಯರೆ ತಯಾರಿಸಿದ ವಸ್ತುಗಳ ಮಳಿಗೆಗಳು ಸಹಾ ಇರಲಿವೆ ಎಂದರು. ರೆ.ಫಾ. ಜಾನ್ ಫರ್ನಾಂಡಿಸ್, ಮೋಳಿ ಫಟಾಡೊ, ಜಾನ್ ರೋಡ್ರಿಗಸ್, ಶಶಿರೇಖಾ ಇದ್ದರು.

## ತಾಲೂಕು ಆಡಳಿತದಿಂದ ಅಂಬೇಡ್ಕರ್ ಜಯಂತಿ



ಗುಂಡ್ಲುಪೇಟೆ ; ಈ ಬಾರಿ ತಾಲೂಕು ಆಡಳಿತದ ವತಿಯಿಂದ ವಿಜೃಂಭಣೆಯಿಂದ ಬಾಬು ಜಗಜೀವನರಾಂ ಮತ್ತು ಡಾ ಬಿ ಅರ್ ಅಂಬೇಡ್ಕರ್ ಜಯಂತಿ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು.

ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಂವಿಧಾನ ಪಿತಾಮಹ ಹಾಗೂ ಮಾಜಿ ಉಪಪ್ರಧಾನಿ ಬಾಬು ಜಗಜೀವನರಾಂ ಜಯಂತಿ ಆಚರಣೆ ಕುರಿತು ಗಹನ ಚರ್ಚೆ ನಡೆಸಲಾಯಿತು. ಅಭಿಪ್ರಾಯ ಹಂಚಿಕೊಂಡ ದಲಿತ ಮುಖಂಡರು ಮಹಾನ್ ನಾಯಕರ ಜಯಂತಿಯನ್ನ ಏ 5 ರಂದು ಆಚರಣೆ ಮಾಡುವ ವೇಳೆ ವಿವಿದ ಕಲಾತಂಡಗಳ ಜತೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಾವಚಿತ್ರ ಹೊತ್ತ ಬೆಳ್ಳಿ ರಥದೊಂದಿಗೆ ಮೆರವಣಿಗೆ ನಡೆಸಬೇಕು ಹಾಗೆಯೇ ಪಟ್ಟಣದ ಹಳೆ ಬಸ್ ನಿಲ್ದಾಣದ ಬಳಿ ಇರುವ ರಂಗ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಅಯೋ ಜನೆ ಮಾಡಬೇಕು ಎಂದರು. ಏಪ್ರಿಲ್ 14ರಂದು ಡಾ ಬಿ ಅರ್ ಅಂಬೇಡ್ಕರ್ ಜಯಂತಿಯನ್ನು ಈ ಬಾರಿ ಅನೆ ಕರೆಸಿ ಬಾಬಾ ಸಾಹೇಬರ ಭಾವಚಿತ್ರ ಮೆರವಣಿಗೆ ನಡೆಸಬೇಕು ಎಂದರು ವೇದಿಕೆ ಕಾರ್ಯ ಕ್ರಮವನ್ನು ದೇವರಾಜು ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿ ಎಂದು ಕೆಲವರು ಸಲಹೆ ನೀಡಿದರು.ಕ್ಷೇತ್ರ ಶಿಕ್ಷಣಾಧಿಕಾರಿ ಟಿ ಅರ್ ಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಶಿಧರ್, ಮುಖಂಡರಾದ ಹುಣಸನಪುರ ನಂಜುಂಡಸ್ವಾಮಿ, ಸುಭಾಷ್ ಮಾಡ್ರಹಳ್ಳಿ ಆರ್.ಡಿ.ಉಲ್ಲಾಸ್, ಗೋವಿಂದನಾಯಕ, ಮುತ್ತಣ್ಣ, ಈಶ್ವರ್, ಬಲಚಲವಾಡಿ ಚಿಕ್ಕಣ್ಣ, ರಮೇಶ್, ಮಲ್ಲಿಕಾರ್ಜುನ್, ಬ್ರಹ್ಮಾನಂದ ಸೇರಿದಂತೆ ಹಲವು ಮಂದಿ ಮುಖಂಡರು ಹಾಜರಿದ್ದರು.

# ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ

## ಜನಸ್ಪಂದನ ಟ್ರಸ್ಟ್ ಹಾಗೂ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮ

ಮೈಸೂರು: ನಗರದ ರಾಮಸ್ವಾಮಿ ವೃತ್ತದಲ್ಲಿ ಎಂ.ಕೆ.ಸೋಮಶೇಖರ್ ನೇತೃತ್ವದ ಜನಸ್ಪಂದನ ಟ್ರಸ್ಟ್ ಹಾಗೂ ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಇರಾನ್ ಸೇರಿ ವಿವಿಧ ದೇಶಗಳಲ್ಲಿ "ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ"ಶಾಂತಿ ಸಂದೇಶ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಾಜಿ ಶಾಸಕ ಹಾಗೂ ಜನಸ್ಪಂದನಾ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಸೋಮಶೇಖರ್ ಮಾತನಾಡಿ, ಜಾಗತೀಕ ಯುದ್ದ ವಿಶ್ವದ ಎಲ್ಲಾ ದೇಶಗಳ ಮೇಲೆ ವ್ಯಾಪಕ ಪರಿಣಾಮ ಬೀರಲಿದ್ದು, ಯುದ್ಧದ ಭೀಕರತೆ, ದಮಾನವ ಜೀವಹಾನಿ, ಆರ್ಥಿಕ ನಷ್ಟಕ್ಕೆ ಕಾರಣವಾಗಿದೆ. ಮನುಷ್ಯ ವಿಕಾಸ ಆಗಲು ಲಕ್ಷಾಂತರ ವರ್ಷಗಳ ಕೋಟ್ಯಾಂತರ ಜನರ ಬುದ್ಧಿ ಶ್ರಮದಿಂದ ಮನುಷ್ಯ ವಿಕಾಸ ಹೊಂದಿದ್ದಾನೆ. ಯುದ್ಧದ ಮೂಲಕ ಮತ್ತೆ ಮನುಷ್ಯ ಸರ್ವನಾಶವಾಗುತ್ತಾನೆ.ಆದಷ್ಟು ಬೇಗನೆ ಯುದ್ಧ ಕೊನೆಗೊಳ್ಳಲಿ. ನಾಗರೀಕರ ಆಸ್ತಿ ಪಾಸ್ತಿಗೆ ಬೆಲೆ ಇಲ್ಲವೇ? ನಾಗರೀಕರ ಬದುಕಿಗೆ ಬೆಲೆ ಇಲ್ಲವೇ? ಮಾನವೀಯತೆಗಿಂತ ಬೇರೇನು ಇಲ್ಲ.ಯುದ್ಧ ನಿಲ್ಲಲಿ ಶಾಂತಿ ನೆಲೆಸಲಿ ಎಂದರು.

ಕೆಲವು ದಿನಗಳಿಂದ ಇರಾನ್, ಇಸ್ರೇಲ್, ಅಮೇರಿಕಾದಂತಹ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದ ದುಷ್ಪರಿಣಾಮ ಜಗತ್ತಿನ ಮೂಲೆ ಮೂಲೆಗೂ ತಲುಪುತ್ತಿದೆ. ಶಾಂತಿಯು ಸಾಮರಸ್ಯ ಸಮಾಜದ ಕೀಲಿ ಕೈ ಇದ್ದಂತೆ. ಶಾಂತಿ ನೆಲೆಗೊಂಡರೆ ಮಾತ್ರ ಪ್ರತಿಯೊಂದು ದೇಶವೂ ಸಹೋದರತ್ವದಿಂದ ಇರಲು ಹಾಗೂ ನಾಗರೀಕರಾದ ನಾವು ಸುಸ್ಥಿರ ಜೀವನ ನಡೆಸಲು ಸಾಧ್ಯವೇ ಹೊರತು ಯುದ್ಧ ಮತ್ತು ಹಿಂಸಾಚಾರದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದರು.




### ಭಾರತದ ಮೇಲೆ ದೊಡ್ಡ ಪರಿಣಾಮ

ಸಾಮಾಜಿಕ ಹೋರಾಟಗಾರ ಪ್ರೊ. ಕಾಳಚನ್ನೇಗೌಡ ಮಾತನಾಡಿ, ಈಗಾಗಲೇ ಮೊದಲನೇ ಮತ್ತು ಎರಡನೇ ಮಹಾಯುದ್ಧದ ಪರಿಣಾಮವಾಗಿ ಅಪಾರ ಪ್ರಮಾಣದ ನಷ್ಟಗಳು ಅನುಭವಿಸಿವೆ.ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಉಂಟಾದ ಸಾವು ನೋವುಗಳು ಇಂದಿಗೂ ಪರಿಹಾರವಾಗಿಲ್ಲ. ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಭೂಮಿಯ ಮೇಲೆ ಅಣುಬಾಂಬ್ ದಾಳಿಯ ವಿಕಿರಣದಿಂದಾಗಿ ಇವತ್ತಿಗೂ ಜನ ತತ್ತರಿಸಿ ಹೋಗಿದ್ದಾರೆ. ಹೊಸ ಜೀವಿಗಳು ಹುಟ್ಟುವ ವೇಳೆಯಲ್ಲಿಯೂ ಅಂಗವೈಕಲ್ಯತೆಯಿಂದ ಕೂಡಿದೆ. ಭೂಮಿಯ ಮೇಲೆ ಹವ್ಯಾಹತವಾದ ಪರಿಣಾಮ ಬೀರುತ್ತಿದೆ. ಇವತ್ತಿನ ಶಸ್ತ್ರಾಸ್ತ್ರಗಳ ಆರ್ಭಟದಿಂದಲೂ ಹೆಚ್ಚು ಸಾವುನೋವುಗಳು ಸಂಭವಿಸುತ್ತಿವೆ.ಮಧ್ಯ ಪ್ರಾಚ್ಯ ಯುದ್ಧದ ಕೇಂದ್ರದಿಂದ ಭಾರತ ದೂರದಲ್ಲಿದ್ದರೂ ಸಹ ಭಾರತದ ಮೇಲೆ ದೊಡ್ಡ ಪರಿಣಾಮ ಬೀರಿದೆ.ಬಡಬಗ್ಗರ ಬದುಕು ಸಹ ಕಷ್ಟಕರವಾಗಿದೆ.ಬಹುದೊಡ್ಡ ಕೈಗಾರಿಕೆಗಳು ನಿಂತಿವೆ. ಯುದ್ಧಕ್ಕೆ ಒಳಗಾದ ಭೂಪ್ರದೇಶ ಬಂಜರಾಗುತ್ತಿವೆ.ಲಕ್ಷಾಂತರ ಸೇತುವೆಗಳು, ಅಣೆಕಟ್ಟುಗಳು, ಕೈಗಾರಿಗಳು ನಾಶವಾಗಿವೆ.ಆಗಾಗೀ ಸಮಾಜಕ್ಕೆ,ದೇಶಕ್ಕೆ,ವಿಶ್ವಕ್ಕೆ ಯುದ್ಧಗಳು ಅವಶ್ಯಕವಲ್ಲ.ಶಾಂತಿ ನೆಲೆಸಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಸೆನೆಟ್ ಮಾಜಿ ಸದಸ್ಯ ಗೋಪಿನಾಥ್, ಮಾಜಿ ಮಹಾಪೌರ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಜೆ.ಗೋಪಿ, ಎಂ.ಸುನೀಲ್, ಅನಂತ್, ಆರ್.ಹೆಚ್.ಕುಮಾರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಸಾಗರೋತ್ತರ ಕನ್ನಡ ಸಂಘದ ರವಿ, ಜೈ ಭಾರತ್ ಸಂಘಟನೆಯ ಅಧ್ಯಕ್ಷ ಕಲೀಂ ಷರೀಫ್, ಮುಖಂಡರಾದ ಜೋಗಿ ಮಹೇಶ್,ಪಟಾಕಿ ಮಂಜುನಾಥ್, ಹೇಮಂತ್ , ಪುಟ್ಟಣ್ಣ, ರಾಮ್, ಉಪಾಧ್ಯಕ್ಷ ಪುಟ್ಟಸ್ವಾಮಿ, ಜಗನ್ನಾಥ್ ಭೋವಿ,ಆನಂದ್,ಮೊಹಿಬ್ ಷರೀಫ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜೆ.ವಿನಯ್, ಸದಸ್ಯರಾದ ಡೈರಿ ವೆಂಕಟೇಶ್,ಇಂದಿರಾ, ಮುಖಂಡರಾದ ರವಿಶಂಕರ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಮಹ್ಮದ್ ಫಾರೂಖ್,ಮಾಜಿ ಸದಸ್ಯರಾದ ನಾಸೀರ್,ಶಾದಿಖ್ ಉಲ್ಲಾ ರೆಹಮಾನ್,ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ, ಉಪಾಧ್ಯಕ್ಷರಾದ ರಾಕೇಶ್, ನವೀನ್ ಎಂ ಕೆಂಪಿ,ಶಶಾಂಕ್, ಕಾರ್ತಿಕ್,ವಿಶ್ವನಾಥ್ (ವಿಶ್ವ), ನಾಗರತ್ನ ಮಂಜುನಾಥ್, ಮಹದೇವಮ್ಮ, ನಾಗರತ್ನ ನಾಗರಾಜು,ಪುಟ್ಟತಾಯಮ್ಮ ಶಿವಣ್ಣ,ಸುಬ್ಬಮ್ಮ, ಲಕ್ಷ್ಮಿ,ಫಿರ್ದೋಸ್ ಭಾನು,ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರಾದ ಮದನ್, ರೂಪೇಶ್,ಸಿದ್ದರಾಮು, ರವೀಶ್,ಚಿಕ್ಕಲಿಂಗು, ವಸಂತ್ , ಸತೀಶ್ ನಾಯಕ್,ಚಂದ್ರಶೇಖರ್,ಮೋಹನ್,ಮೈಸೂರು ಬಸವಣ್ಣ ,ಲಖನ್, ಮಧುರಾಜ್, ಶೇಖರ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

# ಕಡಿಮೆ ಹಣಕ್ಕೆ ಐಶಾರಾಮಿ ಕಾರು ಆಸೆ: ವಂಚಕರ ಬಂಧನ

ಮೈಸೂರು: ಫೇಸ್ ಬುಕ್ ಮೂಲಕ ಪರಿಚಿತರಾಗಿ ಕಡಿಮೆ ಹಣಕ್ಕೆ ಬೆಲೆ ಬಾಳುವ ಕಾರುಗಳನ್ನು ಕೊಡುತ್ತೇವೆಂದು ಹೇಳಿಕೊಂಡು ವಂಚಿಸುತ್ತಿದ್ದ ಜಾಲವೊಂದನ್ನು ಭೇದಿಸಿರುವ ಮೈಸೂರು ಜಿಲ್ಲಾ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ ಒಂದು ಕೋಟಿ ಮೌಲ್ಯದ 8 ಐಶಾರಾಮಿ ಕಾರುಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ನಗರದ ಸಿ.ಎಸ್. ಅಭಿಷೇಕ್ ಎಂಬುವವರು ಮಾ.18ರಂದು ಬನ್ನೂರು ಪೊಲೀಸ್ ಠಾಣೆಗೆ ಹಾಜರಾಗಿ ಮೈಸೂರಿನ ರುಮಾನ್ ಷರೀಫ್ ಎಂಬುವರು ಫೇಸ್‌ಬುಕ್ ಮೂಲಕ ಪರಿಚಯವಾಗಿ ತನ್ನ ಬಳಿ ಇರುವ ಐಷಾರಾಮಿ ಕಾರುಗಳನ್ನು ಕಡಿಮೆ ಬೆಲೆಗೆ ಕೊಡುತ್ತೇನೆಂದು ಹೇಳಿ ನನ್ನನ್ನು ನಂಬಿಸಿ, ಮುಜಾಹಿದ್ ಪಾಷಾ ಹಾಗೂ ಶಾಹುಬುದ್ದಿನ್ ರೊಂದಿಗೆ ಸೇರಿಕೊಂಡು ಪಿರ್ಯಾದಿಗೆ ಕಾರುಗಳನ್ನು ನೀಡಿ ಯಾವುದೇ ದಾಖಲೆ ನೀಡದೇ ಸತಾಯಿಸಿದ್ದಾರೆ. ಅಲ್ಲದೆ, 5.50,000ರೂ ಹಣ ಪಡೆದು ಸತಾಯಿಸುತ್ತಿರುವುದಾಗಿ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಕರಣ ತನಿಖೆ ಕೈಗೊಂಡ ಪೊಲೀಸರು ಗೌಸಿಯಾನಗರದ ರುಮಾನ್ ಷರೀಫ್(26), ರಾಜೀವ್ ನಗರದ ಕಾರಿನ ಡೀಲರ್ ಮುಜಾಹಿದ್ ಪಾಷ(37), ಲಷ್ಕರ್ ಮೊಹಲ್ಲಾದ ಷಾಹಬುದ್ದೀನ್(25)ರನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತರಿಂದ ಹೆಚ್‌ಆರ್.26.ಡಿಎ.5991 ಆಡಿ ಕ್ಯೂ5, ಕೆಎ19.ಎಂಇ 4591. ಪೋಲೋ 1.2, ಕೆಎ50.ಎನ್.0577 ಚೆವರೊಲೆಟ್ ಕ್ರೂಜ್, ಕೆ.ಎ.06 ಎಂ.ಪಿ.8903 ಫೋರ್ಡ್ ಇಕೋ ಸ್ಪೋರ್ಟ್, ಕೆಎ.04.ಎಂಎಲ್.1918. ಹುಂಡೈ 120.ಆಸ್ಟಾ, ಡಿಎಲ್.2.ಸಿಕ್ಯೂ.1883. ಆಡಿ ಎಜಿಎ4, ಕೆಎ06. ಎನ್.7973.ವೋಕ್ಸ್‌ವ್ಯಾಗನ್ ವೆಂಟೊ, ಕೆಎ18.ಪಿ.0829 ವೋಕ್ಸ್‌ವ್ಯಾಗನ್ ಪೋಲೋ 1.2 ಒಂದು ಕೋಟಿ 10ಲಕ್ಷ ರೂ. ಮೌಲ್ಯದ ಕಾರುಗಳನ್ನು ವಶಕ್ಕೆ ಪಡೆದಿರುವುದಾಗಿ ತಿಳಿಸಿದರು.



ಇನ್ನೂ ಕಾರಿನ ಮಾಲೀಕರು ಯಾರೆಂಬುದು ಇನ್ನೂ ಪತ್ತೆಯಾಗಿಲ್ಲ. ಕಾರಿನ ಕಳವಿನ ಬಗ್ಗೆ ಯಾವುದೇ ಮಾಹಿತಿ ದೂರು ಕಂಡು ಬಂದಿಲ್ಲ. ಬಂಧಿತರ ಬಗ್ಗೆ ಈ ಹಿಂದೆ ಯಾವುದಾದರೂ ಪ್ರಕರಣಗಳಲ್ಲಿ ಭಾಗಿಯಾಗಿರುವ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ. ಅಲ್ಲದೆ, ಇವರ ಹಿಂದೆ ದೊಡ್ಡ ಗ್ಯಾಂಗ್ ಇರುವ ಶಂಖೆ ಸಹ ವ್ಯಕ್ತವಾಗಿದೆ. ಏಕೆಂದರೆ ಹರಿಯಾಣದಲ್ಲಿ ನೊಂದಣಿಯಾದ ಕಾರು ಸಹ ಪತ್ತೆಯಾಗಿರುವುದರಿಂದ ಪ್ರಕರಣ ಕುರಿತು ಮತ್ತಷ್ಟು ತನಿಖೆ ನಡೆಸಲಾಗುತ್ತಿದೆ. ಇವರು ಬೇರೆ ಬೇರೆ ರಾಜ್ಯದಿಂದ ಕಾರಗಳನ್ನು ತಂದು ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿ ನಂಬಿಸಿ ವಂಚಿಸುತ್ತಿರುವ ಬಗ್ಗೆ ಮತ್ತಷ್ಟು ತನಿಖೆಯಿಂದಷ್ಟೇ ತಿಳಿದು ಬರಬೇಕಿದೆ. ಅಲ್ಲದೆ, ಇವರೊಟ್ಟಿಗೆ ಮತ್ತಷ್ಟು ಮಂದಿ ಇರುವ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

> ದೂರುದಾರರಾದ ಅಭಿಷೇಕ್ ಅವರಿಗೆ ಬನ್ನಿಮಂಟಪದ ಕಾರ್ ಗ್ಯಾರೇಜ್ ವೊಂದರಲ್ಲಿ ಮೆಕಾನಿಕ್ ಆಗಿದ್ದ ಷಾಹಬುದ್ದೀನ್ ತಮಗೆ ಕಡಿಮೆ ದರಲ್ಲಿ ಕಾರು ಕೊಡಿಸುವುದಾಗಿ ಹೇಳಿ ನಂಬಿಸಿ ಮೋಸ ಮಾಡಿದ್ದರಿಂದ ಪ್ರಕರಣ ಬೆಳಕಿಗೆ ಬಂದಿದೆ. ಸಾರ್ವಜನಿಕರು ಫೇಸ್‌ಬುಕ್ ಸೇರಿ ಯಾವುದೇ ಸಾಮಾಜಿಕ ಜಾಲತಾಣದಲ್ಲಿ ಕಡಿಮೆ ಹಣಕ್ಕೆ ವಸ್ತುಗಳನ್ನು ಕೊಳ್ಳುವ ಮುನ್ನ ಎಚ್ಚರಿಕೆಯಿಂದ ಇರುವುದು ಉತ್ತಮ.
>
> – **ಮಲ್ಲಿಕಾರ್ಜುನ ಬಾಲದಂಡಿ** ಜಿಲ್ಲಾ ಎಸ್ಪಿ

ಅಪರ ಪೊಲೀಸ್ ಅಧೀಕ್ಷಕ ಎಲ್.ನಾಗೇಶ್ ನೇತೃತ್ವದಲ್ಲಿ ಡಿಎಸ್‌ಪಿ ಜಿ.ಎಸ್.ರಘು, ಬನ್ನೂರು ಪೊಲೀಸ್ ಠಾಣೆಯ ಪಿ.ಐ. ಸತೀಶ, ಪಿ.ಎಸ್.ಐ ಸುದರ್ಶನ್, ಎಎಸ್‌ಐ ಸತೀಶ್ ಮತ್ತು ಸಿಹೆಚ್ ಸಿ–64 ಅಬ್ದುಲ್ ಲತೀಫ್, ಸಿಹೆಚ್ ಸಿ–94 ಎನ್.ಎ.ಅಶೋಕ, ಸಿಹೆಚ್‌ಸಿ–99 ಭಾಸ್ಕರ್ ಪ್ರಕರಣದ ಆರೋಪಿಗಳನ್ನು ಮತ್ತು ಮಾಲು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದು ಸದರಿ ತಂಡಕ್ಕೆ ವಿಶೇಷ ಬಹುಮಾನ ನೀಡುತ್ತಿರುವುದಾಗಿ ತಿಳಿಸಿದರು.

**ಡಿ.ಉದಯಕುಮಾರ್ ಕರೆ**

# ವಿದ್ಯಾರ್ಥಿಗಳು ಸ್ವ ಉದ್ಯೋಗದತ್ತ ಗಮನಹರಿಸಿ

ಮೈಸೂರು: ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿಯೊಂದಿಗೆ ಸ್ವಉದ್ಯೋಗದತ್ತ ಗಮನಹರಿಸುವುದು ಇಂದಿನ ಅಗತ್ಯವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಡಿ.ಉದಯಕುಮಾರ್ ಹೇಳಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ವಸಂತ್ ಮಹಲ್ ನಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಮತ್ತು ಕೆರಿಯರ್ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರಸ್ತುತ ಜಗತ್ತು ಅತ್ಯಂತ ಸ್ಪರ್ಧಾತ್ಮಕವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ವೃತ್ತಿ ಮಾರ್ಗದರ್ಶನ ಬಹಳ ಮುಖ್ಯ. ವಿದ್ಯಾಭ್ಯಾಸದ ನಂತರ ವೃತ್ತಿ ಜೀವನವನ್ನು ಹೇಗೆ ಪ್ರಾರಂಭಿಸಬೇಕು ಅಥವಾ ವೇಗವಾಗಿ ಯಶಸ್ಸು ಗಳಿಸಲು ಯಾವ ಹಾದಿ ಹಿಡಿಯಬೇಕು ಎಂಬ ಗೊಂದಲ ಸಹಜವಾಗಿ ವಿದ್ಯಾರ್ಥಿಗಳಲ್ಲಿ ಇರುತ್ತದೆ ಎಂದು ತಿಳಿಸಿದರು.







ವಿದ್ಯಾರ್ಥಿಗಳು ಕೇವಲ ಕೋರ್ಸ್ ಆಧಾರಿತ ಉದ್ಯೋಗಗಳ ಬೆನ್ನತ್ತುವ ಬದಲು, ಪರ್ಯಾಯವಾಗಿ ತಮ್ಮದೇ ಆದ ಸ್ವಉದ್ಯೋಗಗಳನ್ನು ಕೈಗೊಳ್ಳಲು ಪ್ರಯತ್ನಿಸಬೇಕು. ಕೌಶಲ್ಯ, ನಿರ್ದಿಷ್ಟ ಗುರಿ ಮತ್ತು ಕ್ರಿಯಾಶೀಲತೆ ಇಲ್ಲದಿದ್ದರೆ ಇಂತಹ ಸಮ್ಮೇಳನಗಳು ವ್ಯರ್ಥವಾಗುತ್ತವೆ. , ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು, ಅದರಲ್ಲಿ ಹೆಚ್ಚಿನ ಸಾಧನೆ ಮಾಡಲು ಬೇಕಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸರ್ಕಾರಿ ಬಿ.ಇ.ಡಿ ಕಾಲೇಜಿನ ಕಿರಿಯ ರೀಡರ್ ಅಮಿತ್ ಮಾತನಾಡಿ "ನಮ್ಮ ಇಲಾಖೆಯ ಅತ್ಯುತ್ತಮ ಕಾರ್ಯಕ್ರಮಗಳಲ್ಲಿ 'ವೃತ್ತಿ ಮೇಳ' ಕೂಡ ಒಂದು. ದೇಶದ ಅತಿ ದೊಡ್ಡ ಸಮಸ್ಯೆ ಎಂದರೆ ಅದು ನಿರುದ್ಯೋಗ. ಆದರೆ ನಿರುದ್ಯೋಗಕ್ಕೆ ಮೂಲ ಕಾರಣ ಜನಸಂಖ್ಯೆಯಲ್ಲ, ಬದಲಾಗಿ ನಮ್ಮಲ್ಲಿರುವ ಕೌಶಲ್ಯಗಳ ಕೊರತೆ. ನಾವು ನಮ್ಮಲ್ಲಿರುವ ಮಾನವ ಸಂಪನ್ಮೂಲವನ್ನು ಅತ್ಯುತ್ತಮವಾಗಿ ಬಳಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 22 ಇಲಾಖೆಗಳ ಮಳಿಗೆಯನ್ನು ಇರಿಸಲಾಗಿತ್ತು. ವಿವಿಧ ಶಾಲಾ ಕಾಲೇಜುಗಳಿಂದ 1255 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ನಂತರ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಮಾಹಿತಿಯನ್ನು ಮೇಳದಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಜಿಐಟಿಐನ ಜೂನಿಯರ್ ಟ್ರೈನಿಂಗ್ ಆಫೀಸರ್ ಅರವಿಂದ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ನಾಗಮ್ಮ, ಡಯಟ್ ನೋಡಲ್ ಅಧಿಕಾರಿ ಕೆ.ಎಚ್.ಚಂದ್ರಶೇಖರ್ ಹಾಗೂ ಲೆಕ್ಕ ಅಧೀಕ್ಷಕ ಬಿ.ಆರ್.ಮಧು ಉಪಸ್ಥಿತರಿದ್ದರು.

# ನಾಳೆ ಮಹಾಜನ ಪದವಿ ದಿನಾಚರಣೆ



ಮೈಸೂರು: ಜಯಲಕ್ಷ್ಮಿಪುರಂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭ ಮಾ.28ರ ಮಧ್ಯಾಹ್ನ 3ಕ್ಕೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾ ಸಭಾಂಗಣದಲ್ಲಿ ನಡೆಯುತ್ತಿದೆ ಎಂದು ಪ್ರಾಚಾರ್ಯರಾದ ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 2024–25 ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ ಕಾರ್ಯಕ್ರಮಗಳ 323 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಇವರಲ್ಲಿ 176 ಮಂದಿ ಉನ್ನತ ಶ್ರೇಣಿ, 122 ವಿದ್ಯಾರ್ಥಿಗಳು ಪ್ರಥಮ ದರ್ಜೆ, 26 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆಂದರು.

ಇದಲ್ಲದೆ, ಸ್ನಾತಕ ಪದವಿ ವಿಭಾಗದ 409 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 84 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 315 ವಿದ್ಯಾರ್ಥಿಗಳು ಪ್ರಥಮ ದರ್ಜೆ, 20 ವಿದ್ಯೆಆರ್ಥಿಗಳು ಪದಕದೊಂದಿಗೆ ನಗದು ಬಹುಮಾನ, ನಾಲ್ವರು ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯುತ್ತಿದ್ದಾರೆಂದು ಮಾಹಿತಿ ನೀಡಿದರು. ಸಮಾರಂಭದಲ್ಲಿ ಸಂಸದ ಡಾ.ಸಿ.ಎನ್. ಮಂಜುನಾಥ್ ಪದವಿ ಪ್ರದಾನ ಭಾಷಣ ಮಾಡಲಿದ್ದಾರೆ, ಕುಲಪತಿ ಎನ್.ಕೆ. ಲೋಕನಾಥ್ ಮುಖ್ಯ ಅತಿಥಿಯಾಗಿರುವರು, ಟಿ. ಮುರಳೀಧರ ಭಾಗವತ್ ಅಧ್ಯಕ್ಷತೆ ವಹಿಸುವರು, ಡಾ.ಟಿ.ವಿಜ ಯಲಕ್ಷ್ಮಿ ಮುರಳೀಧರ್ ಉಪಸ್ಥಿತರಿರುವರೆಂದರು. ಡಾ.ಸಿ.ಕೆ.ರೇಣುಕಾರ್ಯ, ಶ್ರುತಿ ಪೂಣಚ್ಚ, ಡಾ.ಎಚ್.ಶ್ರೀಧರ್ ಇದ್ದರು.

# ಕ್ರೀಡೆಯನ್ನು ದಿನನಿತ್ಯದ ಚಟುವಟಿಕೆಯಾಗಿ ಪರಿಗಣಿಸಿ



ಚಾಮರಾಜನಗರ: ಕ್ರೀಡೆಯನ್ನು ದಿನನಿತ್ಯದ ಚಟುವಟಿಕೆಯ ಭಾಗವಾಗಿ ಪರಿಗಣ ಸಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತರುವಂತೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿಂದು ಯುವ ವ್ಯವಹಾರಗಳು ಹಾಗೂ ಕ್ರೀಡಾ ಸಚಿವಾಲಯ, ಮೈ ಭಾರತ್ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾಮಟ್ಟದ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಕ್ರೀಡೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಕ್ರೀಡಾ ಮನೋಭಾವ ಮೆರೆ ಯಬೇಕು. ಇತರೆ ಕ್ರೀಡಾಪಟುಗಳಿಗೂ ಮಾದರಿಯಾಗಬೇಕು. ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗಿಯಾದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಅವಕಾಶಗಳು ಒದಗಿ ಬರಲಿವೆ. ಕ್ರೀಡಾಕೂಟದಲ್ಲಿ ತೀರ್ಪುಗಾರರು ನ್ಯಾಯಬದ್ಧ ಹಾಗೂ ನಿಷ್ಪಕ್ಷಪಾತವಾಗಿ ತೀರ್ಪು ನೀಡಬೇಕು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಆರ್.ಎಸ್. ಅಶ್ವಿನಿ ಮಾತನಾಡಿ ಯುವಕರಲ್ಲಿ ದೇಹ, ಮನಸ್ಸು ಸದೃಢಗೊಳ್ಳಲು ಕ್ರೀಡೆ ಅತ್ಯಾವಶ್ಯಕವಾಗಿದೆ. ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಬೆಳವಣ ಗೆಗೆ ಕ್ರೀಡೆ ಒಂದು ಉತ್ತಮ ವೇದಿಕೆಯಾಗಲಿದೆ. ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಭಾವಂತ ಗ್ರಾಮೀಣ ಕ್ರೀಡಾಪಟುಗಳನ್ನು ಹೊರತರಲು ಭಾರತ ಸರ್ಕಾರ ಈ ಕಾರ್ಯಕ್ರಮ ರೂಪುಗೊಳಿಸಿದೆ. ಗ್ರಾಮೀಣ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲಿ ಇನ್ನಷ್ಟು ಬೆಳೆಯಬೇಕು. ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ಸಿಗಬೇಕು ಎಂದರು.

ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎನ್.ವಿ. ಸಿಂಧು ಅವರು ಮಾತನಾಡಿ ಕ್ರೀಡೆ ಯಾರೋ ಒಬ್ಬರಿಗೆ ಮೀಸಲಾಗಿಲ್ಲ. ಎಲ್ಲರು ಪಾಲ್ಗೊಳ್ಳಬೇಕು. ಪ್ರತಿಯೊಬ್ಬರ ಶಾರೀರಿಕ ಸುಸ್ಥಿತಿಗೆ ಕ್ರೀಡೆ ಅವಶ್ಯವಾಗಿದೆ. ಪ್ರತಿಯೊಬ್ಬರ ಜೀವನ ಶೈಲಿಯಲ್ಲಿ ಕ್ರೀಡೆ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ದೈನಂದಿನ ಮಾನಸಿಕ ಉಲ್ಲಾಸಕ್ಕೆ ಕ್ರೀಡೆ ಹೆಚ್ಚಿನ ಸಹಕಾರಿಯಾಗಿದೆ ಎಂದರು. ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ. ಬಂಗಾರು, ಮೈ ಭಾರತ್ ಕೇಂದ್ರದ ಸಹನಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾ ಸಂಚಾಲಕ ದೀಪಿಕಾ, ದೈಹಿಕ ಶಿಕ್ಷಣ ನಿರ್ದೇಶಕ ಮಹಾದೇವ್, ಉಪಸ್ಥಿತರಿದ್ದರು.

# ಒಳಮೀಸಲಾತಿ ಜಾರಿಗಾಗಿ ಪ್ರತಿಭಟನೆ

## ಅಂಬೇಡ್ಕರ್ ಭವನದಿಂದ ಡಿಸಿ ಕಚೇರಿಯವರಗೆ ಬೃಹತ್ ಮೆರವಣಿಗೆ

ಚಾಮರಾಜನಗರ, ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟ ಹಾಗೂ ಮಾದಿಗ ಸಂಘಟನೆಗಳ ಒಕ್ಕೂಟ ವತಿಯಿಂದ ನಗರದಲ್ಲಿಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಪಚ್ಚಪ್ಪ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ ರಾಷ್ಟ್ರೀಯ ಹೆದ್ದಾರಿ ತಡೆದು ರಾಜ್ಯ ಸರ್ಕಾರದ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು. ನಂತರ ಮೆರವಣಿಗೆಯು ,ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಾ.ಬಾಬುಜಗಜೀವನರಾಂ




ಸಂಘಟನೆಗಳ ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಕಳೆದ 36 ವರ್ಷಗಳಿಂದಲೂ ಒಳಮೀಸಲಾತಿಗಾಗಿ ಹೋರಾಟ ಮಾಡಿಕೊಂಡು ಬರಲಾಗಿದ್ದು, ಒಳಮೀಸಲಾತಿ ವಿಧೇಯಕವು ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷ ಪಡುವ ಸಂದರ್ಭದಲ್ಲಿ ಒಳ ಮೀಸಲಾತಿ ಅನ್ವಯವಾಗದಂತೆ 56,462 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಮಾರ್ಚ್16ರ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಆ ಮೂಲಕ 35 ವರ್ಷಗಳ ಒಳ ಮೀಸಲಾತಿ ಹೋರಾ ಟಕ್ಕೆ ಮಹಾದ್ರೋಹ ಎಸೆಯಲಾಗಿದೆ. ಸರ್ಕಾರದ ಈ ತೀರ್ಮಾನವನ್ನು ತೀವ್ರವಾಗಿ ಖಂಡಿಸಲಾಗುತ್ತದೆ ಎಂದರು. ಮುಖಂಡರಾದ ಅರಕಲವಾಡಿ ಜವರಯ್ಯ, ಅರಕಲವಾಡಿ ನಾಗೇಂದ್ರ, ಚಾ.ಗು.ನಾಗರಾಜ್, ವಕೀಲರಾದ ಬೂದಿತಿಟ್ಟು ರಾಜೇಂದ್ರ, ಬ್ಯಾಂಕ್ ಬಸವರಾಜು, ಎಲ್ ಐಸಿ ರಾಜಣ್ಣ, ಹಸಗೂಲಿ ಸಿದ್ದಯ್ಯ, ಮೂಡಹಳ್ಳಿ ಮೂರ್ತಿ ಮಾತನಾಡಿದರು. ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಮುಖಂಡರಾದ ಎಲ್ ಐಸಿ ರಾಜಣ್ಣ, ಕೆಸ್ತೂರುಮರಪ್ಪ , ಸಿ.ಎಚ್. ರಂಗಸ್ವಾಮಿ, ಮೂಡಹಳ್ಳಿ ರಾಚಪ್ಪ, ರಾಮಸಮುದ್ರ ಶಿವಣ್ಣ, ದ್ವಾರ್ಕಿ ಬಸವ ರಾಜು, ಶಿವಮಲ್ಲು, ಗೋಪಿ, ಸುನೀಲ್, ವಸಂತ್,ಹನುಮಂತು, ಚಂದ್ರು, ಹನೂರು ಗುರುಸ್ವಾಮಿ, ಬೂದುಬಾಳು ಮಹದೇವು, ಡಾ.ದುಂಡಯ್ಯ ವಕೀಲರಾದ ಸಿದ್ದೇಶ್, ಸಿದ್ದಯ್ಯ, ಪ್ರಭು, ಬೆಳ್ಳಿಯಪ್ಪ, ಸುಂದರ್, ಲಿಂಗರಾಜು, ನಾಗಮಲ್ಲು, ಶಿವಣ್ಣ, ಮುರುಗೇಶ್, ಭಾಗವಹಿಸಿದ್ದರು.

**ನ್ಯಾ.ನಾಗಮೋಹನ್ ದಾಸ್ ಅವರ ಒಳಮೀಸಲಾತಿಯನ್ನು ಸರ್ಕಾರ ಕೂಡಲೇ ಯಥಾವತ್ತಾಗಿ ಜಾರಿ ಮಾಡಬೇಕು. ಒಳಮೀಸಲಾತಿ ಇಲ್ಲದೆ ರಾಜ್ಯ ಸರ್ಕಾರವು ಯಾವುದೇ ಹುದ್ದೆಗಳನ್ನು ಭರ್ತಿ ಮಾಡಬಾರದು. ಒಳಮೀಸಲಾತಿಯನ್ನು ಯಥಾವತ್ತಾಗಿ ಜಾರಿ ಮಾಡಬೇಕು.**

**ಹೆಚ್.ಹೆಚ್ ನಾಗರಾಜು**

### ಭರವಸೆ ನೀಡಿ 2 ವರ್ಷ ಮುಗಿಯುತ್ತಿದ್ದರೂ ಒಳಮೀಸಲಾತಿ ಜಾರಿಗೊಳಿಸುವ ಪ್ರಯತ್ನ ನಡೆಸಲಿಲ್ಲ.

**ಚುನಾವಣೆ ಪೂರ್ವದಲ್ಲಿ ಸರ್ಕಾರ ಬಂದ ಮೊದಲನೇ ಅಧಿವೇಶನದಲ್ಲಿಯೇ ಒಳ ಮೀಸಲಾತಿಯನ್ನು ನಮ್ಮ ಸರ್ಕಾರ ಜಾರಿಗೊಳಿಸುತ್ತದೆ ಎಂದು ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಚಿತ್ರದುರ್ಗ ಸಮಾವೇಶದಲ್ಲಿಯೂ ಅದೇ ಭರವಸೆ ನೀಡಲಾಗಿತ್ತು. ಸರ್ಕಾರ ಬಂದು 2 ವರ್ಷ ಮುಗಿಯುತ್ತಿದ್ದರೂ ಒಳಮೀಸಲಾತಿಯನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ಅಂತಿಮವಾಗಿ ಸುಪ್ರೀಂ ಕೋರ್ಟಿನ ತೀರ್ಪಿನ ನಂತರ ಹೋರಾಟದ ಒತ್ತಡಕ್ಕೆ ಮಣಿದು ಸಚಿವ ಸಂಪುಟದಲ್ಲಿ ಒಳ ಮೀಸಲಾತಿ ಜಾರಿಗೆ ತರುತ್ತೇವೆಂದು ತಾತ್ವಿಕವಾಗಿ ಒಪ್ಪಿಕೊಂಡು 25 2025 ಆಗಸ್ಟ್ 25 ರಂದು ಆದೇಶ ಹೊರಡಿಸಿದ್ದೀರಿ. 2025ರ ಚಳಿಗಾಲದ ಅಧಿವೇಶನದಲ್ಲಿ ಶಾಸನ ಬದ್ಧ ಕಾಯ್ದೆ ಮಾಡಿಕೊಂಡು ರಾಜ್ಯಪಾಲರಿಂದ ಅಂತಿಮ ಅಂಗೀಕಾರ ಪಡೆಯಲಾಗಿದೆ. ಇಷ್ಟೆಲ್ಲ ಇದ್ದರೂ ಒಳ ಮೀಸಲಾತಿ ಇಲ್ಲದೇ ನೇಮಕಾತಿಗಳನ್ನು ಭರ್ತಿ ಮಾಡುವಂತೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರಕ್ಕೆ ಆತ್ಮಸಾಕ್ಷಿ ಇಲ್ಲ ಎಂಬುದನ್ನು ಸಾರುತ್ತದೆ ಎಂದರು.**

### ಸರ್ಕಾರ ನುಡಿದಂತೆ ನಡೆಯಬೇಕು

**ಭಾರತದ ಹಲವಾರು ರಾಜ್ಯದಲ್ಲಿ ಪ.ಜಾತಿ/ ಪ.ಪಂಗಡ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನಬದ್ಧವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಅನುಷ್ಠಾನಗೊಳಿಸಲಾಗಿದೆ. ಆದರೆ ಕರ್ನಾಟಕದಲ್ಲಿ 2022 ಡಿಸೆಂಬರ್ 28ರಂದು ಜಾರಿಗೆ ಬಂದ ಪ.ಜಾ 17% ಮತ್ತು ಪ.ಪಂ 7% ಮೀಸಲು ಪ್ರಮಾಣ ಹೆಚ್ಚಳದಂತೆ ಉದ್ಯೋಗಗಳನ್ನು ನೀಡದೆ ಪರಿಶಿಷ್ಟ ಜಾತಿಗೆ 2% ಕಡಿತ ಎಂದರೆ 1129 ಮತ್ತು ಪರಿಶಿಷ್ಟ ಪಂಗಡಕ್ಕೆ 4% ಕಡಿತ ಎಂದರೆ 2,258 ಒಟ್ಟು ಪ.ಜಾ–ಪ.ಪ ದಲಿತ ಸಮುದಾಯಕ್ಕೆ ಸಿಗಬೇಕಾದ 3387ಕ್ಕು ಹೆಚ್ಚಿನ ಹುದ್ದೆಗಳನ್ನು ತಪ್ಪಿಸಿ 56,432ಹುದ್ದೆಗಳ ಭರ್ತಿಗೆ ಮುಂದಾದ ಪರಿಶಿಷ್ಟ ಜಾತಿಗಳ ವಿರೋಧಿ ನೀತಿಯ ಆದೇಶ ಹಿಂಪಡೆಯಬೇಕು. ಸರ್ಕಾರ ನುಡಿದಂತೆ ನಡೆಯಬೇಕು ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.**

# ವಚನಕ್ರಾಂತಿಗೆ ದೇವರ ದಾಸಿಮಯ್ಯ ಸ್ಫೂರ್ತಿ

**ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ**



ಚಾಮರಾಜನಗರ, ಅಂಕು ಡೊಂಕುಗಳನ್ನು ತಿದ್ದಿ ಸಮಸಮಾಜ ನಿರ್ಮಾಣಕ್ಕಾಗಿ 11ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಶ್ರಮಿಸಿದ ದೇವರ ದಾಸಿಮಯ್ಯ ಅವರು 12ನೇ ಶತಮಾನದಲ್ಲಿ ನಡೆದ ವಚನಕ್ರಾಂತಿಗೆ ಸ್ಫೂರ್ತಿಯಾಗಿದ್ದಾರೆ ಎಂದು ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಅವರು ಹೇಳಿದರು.

ನಗರದ ವರಟನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜಕ್ಕೆ ವಚನಕಾರರ ಕೊಡುಗೆ ಸಾಕಷ್ಟು ಇದೆ. ದೇವರ ದಾಸಿಮಯ್ಯ ಅವರು 176 ವಚನಗಳನ್ನು ರಚಿಸಿದ್ದಾರೆ. 11ನೇ ಶತಮಾನದ ಕೊನೆಯ ಭಾಗದಲ್ಲಿ ದೇವರ ದಾಸಿಮಯ್ಯ ಅವರು ಸಮಾಜ ತಿದ್ದುವ ಕೆಲಸವನ್ನು ಮಾಡಿದ್ದಾರೆ. ಜಾತಿ ವ್ಯವಸ್ಥೆ ಹೋಗಲಾಡಿಸಿ ಸರ್ವರು ಸಮಾನರು ಎಂಬ ಸಂದೇಶವನ್ನು ತಮ್ಮ ಸರಳ ವಚನಗಳ ಮೂಲಕ ಸಾರಿದ್ದಾರೆ ಎಂದು ಅವರು ತಿಳಿಸಿದರು.

ದೇವರ ದಾಸಿಮಯ್ಯ ಅವರು ಅಪಾರ ಜ್ಞಾನ ಹೊಂದಿದ್ದರು. ಗುರುಗಳಿಂದ ಉತ್ತಮ ಸಂಸ್ಕೃತಿ ಜ್ಞಾನವನ್ನು ಪಡೆದರು. ಬಸವಣ್ಣನವರ ವಚನಕ್ರಾಂತಿಗೆ ದೇವರ ದಾಸಿಮಯ್ಯ ಅವರ ಪ್ರಭಾವ, ಸ್ಫೂರ್ತಿ ಇದೆ. ಸಮಾಜದ ಒಳಿತು, ತಿಳಿವಳಿಕೆ ದಾಸಿಮಯ್ಯ ಅವರ ವಚನಗಳಲ್ಲಿ ಕಾಣಬಹುದಾಗಿದೆ ಎಂದು ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಅವರು ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ದೇವರ ದಾಸಿಮಯ್ಯ ಅವರ ವಚನದಲ್ಲಿ ಸಾಕಷ್ಟು ಅರ್ಥಪೂರ್ಣ ವಿಚಾರ ಧಾರೆಗಳಿವೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕಿದೆ. ಎಲ್ಲ ವರ್ಗದ ಜನರ ಹಿತ ಬಯಸಿದ ದಾಸಿಮಯ್ಯ ಅವರ ಆದರ್ಶ ತತ್ವಗಳನ್ನು ಪಾಲಿಸಬೇಕೆಂದು ಸಲಹೆ ಮಾಡಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ ಅವರು ದೇವರ ದಾಸಿಮಯ್ಯ ಅವರು ಮಹಿಳಾ ಸಮಾನತೆ ಕುರಿತು ರಚಿಸಿರುವ ವಚನವೊಂದನ್ನು ವಾಚಿಸಿದರು. 11ನೇ ಶತಮಾನದಲ್ಲಿಯೇ ಹೆಣ ?ಣಗೆ ಸಮಾನತೆ ನೀಡಬೇಕೆಂಬ ಬಹುಮುಖ್ಯ ಸಂದೇಶ ನೀಡಿದ ದೇವರ ದಾಸಿಮಯ್ಯ ಅವರ ವಿಚಾರಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಮುಖ್ಯ ಭಾಷಣ ಮಾಡಿದ ಕೊಳ್ಳೇಗಾಲದ ಸಾಹಿತಿ ಡಾ. ಎನ್. ಮಧುಸೂದನ್ ಅವರು ಭಕ್ತಿಯೇ ಜೀವನವನ್ನಾಗಿ ಮಾಡಿಕೊಂಡು ಸಮಾಜವನ್ನು ಎಚ್ಚರಿಸಿದ ಆದ್ಯ ವಚನಕಾರರೆಂದರೆ ದೇವರ ದಾಸಿಮಯ್ಯ. ಇವರ ಬಗ್ಗೆ 18ನೆ ಶತಮಾನದ ಬಸವಣ್ಣನವರು ಸೇರಿದಂತೆ ಅನೇಕ ವಚನಕಾರರು, ಬರಹಗಾರರು ಸ್ಮರಿಸಿಕೊಂಡಿದ್ದಾರೆ. ಬಸವಣ್ಣನವರ ಭಕ್ತಿ, ಕಾಯಕ, ವಚನಗಳಿಗೆ ದೇವರ ದಾಸಿಮಯ್ಯ ಪ್ರಭಾವವಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ಸಮಾಜದ ಮುಖಂಡರಾದ ಶ್ರೀಧರ್, ವೆಂಕಟೇಶ್, ವಿಜಯ್ ಕುಮಾರ್, ರಾಮಮೂರ್ತಿ, ಗೋಪಾಲ್, ಕಾಂತರಾಜು, ರಾಮಶೆಟ್ಟಿ, ಸಿ.ಬಿ. ಕಾಂತರಾಜು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಮನೆ ಮೇಲೆ ಬಿದ್ದ ಭಾರೀ ತೆಂಗಿನಮರ

ಮೈಸೂರು: ಭಾರೀ ಗಾತ್ರದ ತೆಂಗಿನ ಮರ ಎದುಗಡೆ ಮನೆ ಮೇಲೆ ಬಿದ್ದ ಪರಿಣಾಮ ಮನೆ ಜಖಂಗೊಂಡು ಹಾನಿಯಾದ ಘಟನೆ ನಗರದ ಖಿಲ್ಲೇ ಮೊಹಲ್ಲ ರಾಮಾನುಜ ರಸ್ತೆಯ 14ನೇ ಕ್ರಾಸ್ ನಲ್ಲಿ ನಡೆದಿದೆ.

ಬಡಾವಣೆಯ ಆರ್.ಎಂ.ಸಿ ಬಸವರಾಜಪ್ಪ ಎಂಬುವರ ಮನೆಯಾಗಿದೆ. ಎದುಗಡೆ ಮನೆಯ ಮಾಲಿಕರಿಗೆ ಮರ ತಗೆಸುವಂತೆ ಸಾಕಷ್ಟು ಬಾರಿ ಗಮನಕ್ಕೆ ತಂದಿದ್ದರೂ ನಿರ್ಲಕ್ಷ್ಯ ಮಾಡಿದ್ದರು ಎಂದು ತಿಳಿದು ಬಂದಿದೆ. ಗುರುವಾರ ಮಧ್ಯಾಹ್ನ ಸುಮಾರು 2.30ರ ಸಮಯದಲ್ಲಿ ಮರ ಇದ್ದಕ್ಕಿಂತೆ ಬುಡ ಸಮೇತ ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಯಾರಿಗೂ ಯಾವುದೇ ಪ್ರಾಣ ಹಾನಿಯಾಗಿಲ್ಲ. ಸುಡು ಬಿಸಿಲು ಇರುವುದರಿಂದ ಬೀದಿಯಲ್ಲಿ ಜನರ ಸಂಚಾರವೂ ಇರಲಿಲ್ಲ ಜೊತೆಗೆ ಮನೆಯ ಮೇಲೆಯೂ ಯಾರೂ ಇಲ್ಲದೆ ಹೋಗಿರುವುದರಿಂದ ಆಗಬಹುದಾದ ಅನಾಹುತ ತಪ್ಪಿದೆ.



**ನಮ್ಮ ಮಕ್ಕಳು ಮನೆಯ ಮೇಲೆ ಯಾವಾಗಲೂ ಆಟ ಆಡುತ್ತಿದ್ದರು. ಆದರೆ, ಹೆಚ್ಚು ಬಿಸಿಲು ಇರುವುದರಿಂದ ಯಾರು ಮೇಲೆ ಹೋಗಿಲ್ಲ. ಬೀಳುವ ಹಂತದಲ್ಲಿರುವ ಹಳೆ ಮರಗಳನ್ನು ಪಾಲಿಕೆ ಅಧಿಕಾರಿಗಳು ಮುಂದೆ ನಿಂತು ತೆರವು ಮಾಡಿಸಬೇಕು. ಇಲ್ಲ ಅಂದರೆ, ಮುಂದೆ ಏನಾದರೂ ಅನಾಹುತ ಆದರೆ ಯಾರು ಹೊಣೆ .? ಮುಂದೆ ಬರೋದು ಮಳೆಗಾಲ ಕೂಡಲೇ ಸಂಬಂಧಪಟ್ಟವರು ಇಂತಹ ಹಳೆ ಮರಗಳ ತೆರವು ಮಾಡಿಸಿ ಮುಂದಾಗ ಬಹುದಾದ ಅನಾಹುತ ತಪ್ಪಿಸಲಿ.**

– **ಶ್ರೀಕಂಠಮೂರ್ತಿ** ಮನೆ ಮಾಲಿಕ.

# ಗ್ಯಾಸ್ ಪೂರೈಕೆ ಸಮಸ್ಯೆ ಬಗೆಹರಿಸಿ



ಗುಂಡ್ಲುಪೇಟೆ: ಇರಾನ್– ಇಸ್ರೇಲ್ ಯುದ್ಧ ದಿಂದ ಗ್ರಾಮೀಣ ಭಾಗಕ್ಕೂ ಕಾಲಿಟ್ಟ ಸಿಲಿಂಡರ್ ಸಮಸ್ಯೆ ಎದುರಾಗಿದ್ದು ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಮನಹಳ್ಳಿ ಬಳಿ ಇರುವ ಎಲ್ ಪಿಜಿ ಗ್ಯಾಸ್ ಏಜೆನ್ಸಿ ಮುಂದೆ ಸಾಲಾಗಿ ಸಿಲಿಂಡರ್ ಇಟ್ಟು ಗ್ಯಾಸ್ ಪೂರೈಕೆ ಸಮಸ್ಯೆ ಬಗ್ಗೆ ಸಾರ್ವಜನಿಕರು ಬೇಸರ ಹೊರಹಾಕಿದರು.

ರೈತ ಮುಖಂಡ ಬರಗಿ ಮಹೇಶ್ ಮಾತನಾಡಿ ಮೊದಲು ಜನ ಗ್ಯಾಸ್ ಗೆ ಅವಲಂಬಿತರಾಗದೆ ಬದುಕುತಿದ್ದರು, ಸರ್ಕಾರವೇ ಜನರಿಗೆ ಗ್ಯಾಸ್ ಬಳಕೆ ಬಗ್ಗೆ ಕಡ್ಡಾಯ ಮಾಡಿ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಆರೋಗ್ಯ ವಾಗಿದ ಜನರನ್ನು ದಾರಿ ತಪ್ಪಿಸಿತು ಇವಾಗ ಬೇರೆ ದೇಶದ ಮೇಲೆ ಅವಲಂಬಿತರಾಗುವಂತೆ ಮಾಡಿ ಜನರನ್ನು ದಾರಿ ತಪ್ಪಿಸುತ್ತಿದೆ ಎಂದು ಆರೋಪಿಸಿದರು. ಅರಣ್ಯ ಇಲಾಖೆ ಸೌದೆ ತಂದರೆ ಕೇಸ್ ಹಾಕುತ್ತಾರೆ ಈಗ ಗ್ಯಾಸ್ ಅಡುಗೆ ಮಾಡಲು ಹಾಗುತ್ತಿಲ್ಲ ಮೊದಲು ಅರಣ್ಯದಲ್ಲಿ ಸೌದೆ ತಂದು ಬಳಸುತ್ತಿದ್ದವು ಅದರಂತೆ ಅರಣ್ಯದಲ್ಲಿ ಸವದೆ ತರಲು ಅನುಮತಿ ಕೊಡಿ ಇಲ್ಲ ಸರಿಯಾಗಿ ಗ್ಯಾಸ್ ಪೂರೈಸಿ ಎಂದು ಒತ್ತಾಯಿಸಿದರು.

# ರಾಘವಾಪುರ ಡೈರಿ ಅಧ್ಯಕ್ಷರಾಗಿ ನಾಗೇಶ್ ಅವಿರೋಧ ಆಯ್ಕೆ

ಗುಂಡ್ಲುಪೇಟೆ: ತಾಲ್ಲೂಕಿನ ರಾಘವಾಪುರ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷರಾಗಿ ಹಾಪ್ ಕಾಮ್ ಅಧ್ಯಕ್ಷ ರಾಘವಾಪುರ ಎಂ ನಾಗೇಶ್ ಅವಿರೋಧವಾಗಿ ಆಯ್ಕೆಯಾದರು, ಉಪಾಧ್ಯಕ್ಷ ರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಗ್ರಾಮದ ಮುಖಂಡರಾದ ಮಹದೇವಪ್ಪ, ಶಂಬುಲಿಂಗಸ್ವಾಮಿ, ಮಾಜಿ ಗ್ರಾ.ಪಂ ಅಧ್ಯಕ್ಷರಾದ ಗೋವಿಂದರಾಜು, ಉಲ್ಲಾಸ್, ಗ್ರಾ.ಪಂ ಸದಸ್ಯ ಶಿವಮೂರ್ತಿ, ಮುಕಂಡರಾದ ದ್ವಾರಕೀಶ್, ಸಿದ್ದಶೆಟ್ಟಿ, ನಾಗಸುಂದರ, ಮತ್ತು ಹಾಲು ಉತ್ಪಾದಕ ಸಂಘದ ನಿರ್ದೇಶಕರುಗಳಿದ್ದರು.



## ಪ್ರಧಾನಿ ಮೋದಿ ಅವರಿಂದ ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ: ನಿರಂಜನ್‌ಕುಮಾರ್

# ಕಡುವಿನಕಟ್ಟೆ ಹುಂಡಿ ಗ್ರಾಮದ ಅನೇಕರು ಬಿಜೆಪಿ ಸೇರ್ಪಡೆ

ಚಾಮರಾಜನಗರ, ತಾಲೂಕಿನ ಕಡುವಿನಕಟ್ಟೆ ಗ್ರಾಮದ ಅನೇಕ ಕಾಂಗ್ರೆಸ್ ಮುಖಂಡರು ಪಕ್ಷ ತೊರೆದು ಇಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು,

ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಡುವಿನ ಕಟ್ಟೆ ಹುಂಡಿ( ಕೆ.ಕೆ.ಹುಂಡಿ) ಗ್ರಾಮದ ಮುಖಂಡರಾದ ಪ್ರಕಾಶ್ ಮಂಜು, ದರ್ಶನ್, ನಾಗಣ್ಣ, ಉಮೇಶ್ ಅವರಿಗೆ ಪಕ್ಷದ ಶಾಲ್ಯ ಹಾಕಿ ಸ್ವಾಗತಿಸಿ ಬರ ಮಾಡಿಕೊಂಡರು. ಬಳಿಕ ಮಾತನಾಡಿದ ಅವರು, ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರಮೋದಿ ಅವರ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಪ್ರಪಂಚವೇ ಮೆಚ್ಚುಗೆ ವ್ಯಕ್ತಪಡಿಸಿದೆ. ಅವರ ನಾಯಕತ್ವಕ್ಕೆ ಹಾಗೂ ಬಿಜೆಪಿಗೆ ವಿಶ್ವವ್ಯಾಪಿ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ. ಅದೇ ರೀತಿ ರಾಜ್ಯದಲ್ಲಿಯು ಸಹ ಬಿಜೆಪಿ ಅಧಿಕಾರಕ್ಕೆ ಬರಬೇಕೆಂಬ ಹಂಬಲದೊಂದಿಗೆ ಅನೇಕ ಮುಖಂಡರು ಕಾಂಗ್ರೆಸ್ ತೊರೆದು



ಬಿಜೆಪಿಗೆ ಬರುತ್ತಿದ್ದಾರೆ. . ಕೆಕೆ ಹುಂಡಿ ಗ್ರಾಮದ ಯುವಕರು ಮೋದಿ ಅವರ ನಾಯಕತ್ವವನ್ನು ಮೆಚ್ಚಿ ಬಿಜೆಪಿಗೆ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಗ್ರಾಮ, ಹೋಬಳಿ ವ್ಯಾಪ್ತಿಯಲ್ಲಿ ಇನ್ನು ಹೆಚ್ಚು ಮಂದಿಯನ್ನು ಪಕ್ಷದ ತತ್ವ ಸಿದ್ದಾಂತವನ್ನು ಒಪ್ಪಿ ಸೇರ್ಪಡೆ ಮಾಡಿಕೊಳ್ಳುವ ಮೂಲಕ ತಾಲೂಕಿನ ಪಕ್ಷವನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಬಲಗೊಳಿಸೋಣ. ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಿಸುವ ಮೂಲಕ ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲರು ಪಣ ತೊಡೋಣ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಅರ್. ಮಲ್ಲಿಕಾರ್ಜುನಪ್ಪ ಮಾತನಾಡಿ, ಕ್ಷೇತ್ರದಲ್ಲಿ ಆಡಳಿತ ಕುಸಿದಿದೆ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿಲ್ಲ. ನಗರಸಭೆಯ 31 ವಾರ್ಡುಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ನಿವಾಸಿಗಳು ಪರಿತಪ್ಪಿಸುತ್ತಿದ್ದಾರೆ. ಹಳ್ಳಿಗಳು ಸಹ ಇದಕ್ಕೆ ಹೊರತಾಗಿಲ್ಲ. ಹೀಗಾಗಿ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ತಕ್ಕಪಾಠ ಕಲಿಸಲು ಜನರು ಮನಸ್ಸು ಮಾಡಿದ್ದಾರೆ ಎಂದರು.

ಜಿ.ಪಂ. ಮಾಜಿ ಸದಸ್ಯ ಸಿ.ಎನ್. ಬಾಲರಾಜು ಮಾತನಾಡಿ, ಕಾಂಗ್ರೆಸ್ ದುರಾಡಳಿತ ವಿರುದ್ದ ಜನರು ಬೇಸತ್ತಿದ್ದಾರೆ. ಕಡುವಿನ ಕಟ್ಟೆ ಹುಂಡಿ ಗ್ರಾಮದ ಯುವಕರು ಬಿಜೆಪಿಗೆ ಸೇರ್ಪಡೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಆ ಗ್ರಾಮದ ಬೂತ್‌ನಲ್ಲಿ ಬಿಜೆಪಿಗೆ ಹೆಚ್ಚಿನ ಮತಗಳು ಬರಲಿದೆ. ಆ ನಿಟ್ಟಿನಲ್ಲಿ ನಿಮ್ಮ ಕಾರ್ಯಯೋಜನೆಯನ್ನು ನಾವೆಲ್ಲರು ರೂಪಿಸೋಣ. ಇನ್ನು ಅನೇಕರು ಪಕ್ಷಕ್ಕೆ ಬರುವವರಿದ್ದಾರೆ. ಅವರನ್ನು ಸೇರ್ಪಡೆ ಮಾಡಿ ಕೊಂಡು ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸೋಣ ಎಂದರು. ರಾಷ್ಟ್ರೀಯ ಕಾರ್ಯ ಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಜಿಲ್ಲಾ ಪ್ರಧಾನಕಾರ್ಯ ದರ್ಶಿ ಹೊನ್ನೂರು ಮಹದೇವಸ್ವಾಮಿ, ಗ್ರಾಮಾಂತರ ಮಂಡಲದ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಪಿ ಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ನಿಂಗೇಗೌಡ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಕುಮಾರಸ್ವಾಮಿ, ಎಸ್. ಬಾಲಸುಬ್ರಮಣ್ಯ, ಮಾಜಿ ಅಧ್ಯಕ್ಷ ರಾಜು, ವಕೀಲ ಹೊಸೂರು ಮಹೇಶ್, ಉಡಿಗಾಲ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಹೆಗ್ಗೋಠಾರ ಮಂಜು, ಶಿವಪುರ ಶಕ್ತಿ ಕೇಂದ್ರ ಅಧ್ಯಕ್ಷ ಶಿವರಾಜು ಮೊದಲಾದರು ಇದ್ದರು.

## ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಉನ್ನತ ವ್ಯಾಸಂಗಕ್ಕೆ ಅವಕಾಶ ಮಾಡಿಕೊಡಿ

**ಜಿಲ್ಲಾಧಿಕಾರಿ ಶ್ರೀರೂಪ ಕರೆ**



ಚಾಮರಾಜನಗರ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಅದರಲ್ಲೂ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಉನ್ನತ ವ್ಯಾಸಂಗಕ್ಕೆ ಅವಕಾಶ ಮಾಡಿಕೊಡಲು ಬಂಜಾರ ಸಮುದಾಯ ಮುಂದಾಗುವಂತೆ ಜಿಲ್ಲಾಧಿಕಾರಿ ಶ್ರೀರೂಪ ಸಲಹೆ ಮಾಡಿದರು. ತಾಲೂಕಿನ ಮೂಕನಪಾಳ್ಯದಲ್ಲಿರುವ ಲಕ್ಷ್ಮೀದೇವಿ ಬಂಜಾರ ರಂಗಮಂದಿರದಲ್ಲಿಂದು ಸಂತ ಸೇವಾಲಾಲ್ ಜಯಂತಿ ಅಂಗವಾಗಿ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡಮಿ ವತಿಯಿಂದ ಆಯೋಜಿಸಲಾಗಿದ್ದ ಸಂತ ಶ್ರೀ ಸೇವಾಲಾಲ್ ತತ್ವ ಆದರ್ಶಗಳ ಚಿಂತನ–ಮಂಥನ ಕಾರ್ಯಕ್ರಮ ಉದ್ಘಾಟಿಸಿ, ಸಂತ ಸೇವಾಲಾಲ್ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಸಂತ ಸೇವಾಲಾಲ್ ಅವರು ಆಧ್ಯಾತ್ಮಿಕತೆಯ ಮೂಲಕ ಸಮಾಜ, ಸಮುದಾಯದ ಉನ್ನತಿಗೆ ಬೆಳಕು ಚೆಲ್ಲಿದ ಪವಾಡ ಪುರುಷರು ಆಗಿದ್ದಾರೆ. ಮನುಷ್ಯ ಜನ್ಮ ಸಾರ್ಥಕತೆಗೆ ಸಂತ ಸೇವಾಲಾಲರ ಆದರ್ಶ ಹಾಗೂ ಆಧ್ಯಾತ್ಮಿಕ ಚಿಂತನೆಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕಾಗಿದೆ. ಪಾನಮುಕ್ತ ಸಮಾಜ ನಿರ್ಮಾಣ, ಮಹಿಳೆಯರಿಗೆ ಸಮಾನತೆ ತತ್ವಗಳನ್ನು ಇಡೀ ಮಾನವ ಕುಲಕ್ಕೆ ಮನದಟ್ಟು ಮಾಡಿಕೊಟ್ಟ ಸಂತ ಸೇವಾಲಾಲರು ಮಾದರಿಯಾಗಿದ್ದಾರೆ ಎಂದರು.

ಮೈಸೂರು ಅಬಕಾರಿ ಇಲಾಖೆಯ ಉಪ ಆಯುಕ್ತರಾದ ಡಾ. ಮಹದೇವಿಬಾಯಿ ಅವರು ಮಾತನಾಡಿ ಬಂಜಾರ ಸಮುದಾಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಮೆಟ್ಟಿನಿಂತು ಹೆಣ್ಣುಮಕ್ಕಳಿಗೆ ಎಸ್.ಎಸ್.ಎಲ್.ಸಿ ಮುಗಿದ ತಕ್ಷಣ ಅಥವಾ 18 ವರ್ಷ ತುಂಬಿದ ಬಳಿಕ ಮದುವೆ ಮಾಡದೇ ಉನ್ನತ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ನೀಡಬೇಕು. ಮಹಿಳೆಯರು ಸ್ವಾವಲಂಬಿಗಳಾಗಬೇಕು. ಸಮಾಜ ಉನ್ನತಿಯತ್ತ ಸಾಗಬೇಕು ಎಂದರು. ಸಾಹಿತಿಗಳು ಹಾಗೂ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡಮಿಯ ಸದಸ್ಯ ಸಂಚಾಲಕರಾದ ಜಿ. ಪಳನಿಸ್ವಾಮಿ ಜಾಗೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಎನ್. ರಾಜು, ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ರಾಜ್ಯ ಉಪಾಧ್ಯಕ್ಷರಾದ ಪಿ. ಕುಮಾರ್ನಾಯಕ್, ಸಂಶೋಧಕರಾದ ಡಾ. ಗೋವಿಂದಸ್ವಾಮಿ, ಯುವ ಚಿಂತಕರಾದ ಯೋಗೇಶ್‌ನಾಯಕ್, ಮೂಡಳ್ಳಿಯ ಹವ್ಯಾಸಿ ಬಳಗದ ಮೇಗ್ಯನಾಯಕ್, ಪಿ.ಎ.ಸಿ.ಸಿ. ಸಹಕಾರ ಬ್ಯಾಂಕ್ ನಿರ್ದೇಶಕರಾದ ಪಿ. ಗಣೇಶ್‌ನಾಯಕ್ ಇತರರು ಹಾಜರಿದ್ದರು.

## ಗ್ರಾಮ ಪಂಚಾಯಿತಿಗಳನ್ನು ಕ್ಷಯರೋಗ ಮುಕ್ತಗೊಳಿಸಲು ಶ್ರಮಿಸಿ

**ಜಿ.ಪಂ. ಸಿಇಒ ಮೋನಾ ರೋತ್ ಸೂಚನೆ**

ಚಾಮರಾಜನಗರ: ಕ್ಷಯರೋಗ ತಡೆಗೆ ಮತ್ತಷ್ಟು ಪರಿಣಾಮಕಾರಿಯಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಲ್ಲ ಗ್ರಾಮ ಪಂಚಾಯಿತಿಗಳನ್ನು ಕ್ಷಯರೋಗ ಮುಕ್ತಗೊಳಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕ್ಷಯರೋಗ ದಿನಾಚರಣೆ ಹಾಗೂ ಕ್ಷಯಮುಕ್ತ ಗ್ರಾಮ ಪಂಚಾಯಿತಿಗಳಿಗೆ ಘೋಷಣಾ ಪತ್ರ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರತಿ ವರ್ಷ ಪ್ರಪಂಚದಲ್ಲಿ ಪತ್ತೆಯಾಗುವ ಕ್ಷಯರೋಗ ಪೈಕಿ ಶೇ. 27ರಷ್ಟು ನಮ್ಮ ದೇಶದಲ್ಲೇ ಕಂಡು ಬರುತ್ತಿದೆ. ಜಿಲ್ಲೆಯಲ್ಲೂ ಕ್ಷಯರೋಗದ ಪ್ರಕರಣಗಳು ಇಳಿಮುಖವಾಗಬೇಕಿದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರವೂ



ಅತ್ಯಂತ ಮುಖ್ಯವಾಗಿದ್ದು, ಮತ್ತಷ್ಟು ಪರಿಣಾಮಕಾರಿಯಾಗಿ ಕ್ಷಯರೋಗ ಪ್ರಕರಣಗಳು ಕಡಿಮೆಯಾಗಲು ಕಾರ್ಯನಿರ್ವಹಿಸಬೇಕು ಎಂದರು.

ಕ್ಷಯಮುಕ್ತ ಗ್ರಾಮ ಪಂಚಾಯಿತಿ ಘೋಷಣೆಗೆ 35 ಗ್ರಾಮ ಪಂಚಾಯಿತಿಗಳು ಮೊದಲನೇ ಬಾರಿಗೆ, 15 ಗ್ರಾಮ ಪಂಚಾಯಿತಿಗಳು ಎರಡನೇ ಬಾರಿಗೆ ಹಾಗೂ 5 ಗ್ರಾಮ ಪಂಚಾಯಿತಿಗಳು ಮೂರನೇ ಬಾರಿಗೆ ಆಯ್ಕೆಯಾಗಿವೆ. ಈ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಲಿ. ಕ್ಷಯರೋಗ ನಿರ್ಮೂಲನೆಗೆ ನಿರಂತರ ಪ್ರಯತ್ನ ನಡೆಯಲಿ ಎಂದು ಸಲಹೆ ನೀಡಿದರು. ಕ್ಷಯಮುಕ್ತ ಗ್ರಾಮ ಪಂಚಾಯಿತಿ ಅರ್ಹತೆ ಹೊಂದಲು ಶ್ರಮಿಸಿದ ಎಲ್ಲರಿಗು ಅಭಿನಂದನೆ ಸಲ್ಲಿಸುವುದಾಗಿ ಅವರು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಅವರು ಮಾತನಾಡಿ ಕ್ಷಯರೋಗ ತಡೆಯುವಲ್ಲಿ ಇಡೀ ತಂಡವಾಗಿ ಕರ್ತವ್ಯ ನಿರ್ವಹಿಸಬೇಕಿದೆ. ಈಗಾಗಲೇ ಕ್ಷಯಮುಕ್ತ ಗ್ರಾಮ ಪಂಚಾಯಿತಿಗಳಾಗಲು ಮಾಡಿದ ಸಾಧನೆ ನಿರಂತರವಾಗಿರಲು ಪ್ರಯತ್ನಗಳು ಮುಂದುವರೆಯಬೇಕು. ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ಷಯರೋಗದಂತಹ ಲಕ್ಷಣಗಳು ಕಂಡುಬಂದರೆ ಕುಡಲೇ ತಪಾಸಣೆಗೆ ಒಳಗಾಗಲು ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ. ಎಂ.ಎಸ್. ರವಿಕುಮಾರ್ ಅವರು ಮಾತನಾಡಿ ದೇಶದಲ್ಲಿ ಪ್ರತಿವರ್ಷ 27 ಲಕ್ಷಕ್ಕೂ ಹೆಚ್ಚು ಕ್ಷಯರೋಗ ಪ್ರಕರಣಗಳು ಪತ್ತೆಯಾಗುತ್ತಿವೆ. ಕಳೆದ 2024ರಲ್ಲಿ 35 ಗ್ರಾಮ ಪಂಚಾಯಿತಿಗಳನ್ನು ಕ್ಷಯಮುಕ್ತ ಎಂದು ಘೋಷಿಸಲಾಗಿತ್ತು. 2025ರಲ್ಲಿ 55 ಗ್ರಾಮ ಪಂಚಾಯಿತಿಗಳು ಕ್ಷಯಮುಕ್ತವೆಂದು ಘೋಷಿಸಿ ಪ್ರಮಾಣ ಪತ್ರ ಪಡೆಯುತ್ತಿವೆ ಎಂದರು. ಕಾರ್ಯಕ್ರಮದಲ್ಲಿ ಕ್ಷಯಮುಕ್ತ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳಿಗೆ ಘೋಷಣಾ ಪತ್ರವನ್ನು ಗಣ್ಯರು ವಿತರಿಸಿದರು. ಇದೇ ಸಂದರ್ಭದಲ್ಲಿ ಹೆಚ್.ಐ.ವಿ ಸ್ಥಿತಿಯನ್ನು ತಿಳಿದುಕೊಳ್ಳುವ ಮಿಷನ್ ಏಡ್ಸ್ ಸುರಕ್ಷತಾ ಅಭಿಯಾನದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಆರೋಗ್ಯ ಇಲಾಖೆಯ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಸುಂದರೇಶ್, ಡಾ. ರಾಜೇಶ್, ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿ ರಾಜೀವ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿ ಬಂಧನ

ಗುಂಡ್ಲುಪೇಟೆ: ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿ, ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದ ಘಟನೆ ಪಟ್ಟಣದ ಸುರಭಿ ಹೋಟೆಲ್ ಬಳಿ ನಡೆದಿದೆ.



ಪಟ್ಟಣದ ಹೊಸೂರಿನ ಮಹದೇವ ನಾಯಕ(30) ಬಂಧಿತ. ಈತ ಪಟ್ಟಣದ ಸುರಭಿ ಹೋಟೆಲ್ ಬಳಿ ಕೇರಳ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಗುಂಡ್ಲುಪೇಟೆ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ಆತನ ಬಳಿಯಿಂದ 50 ರೂ. ಮುಖ ಬೆಲೆಯ 139 ಟಿಕೆಟ್(6.950 ರೂ.) ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಸಬ್ ಇನ್ಸ್ ಪೆಕ್ಟರ್ ನರೇಶ್‌ಕುಮಾರ್ ಪೊಲೀಸ್ ಪೇದೆಗಳಾದ ಶಿವರಾಜ್, ಕಿಶೋರ್, ನಟೇಶ್ ಭಾಗವಹಿಸಿದ್ದರು.

## ಚಿನ್ನಾಭರಣ ಕಳ್ಳತನ: ನಾಲ್ವರು ಆರೋಪಿಗಳ ಬಂಧನ

ರಾಮನಗರ: ಕಳೆದ ಫೆಬ್ರವರಿ 16ರಂದು ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ಯಾಮಾರಿಸಿ ಅವರ ಬ್ಯಾಗ್‌ನಲ್ಲಿದ್ದ 383 ಗ್ರಾಂ ತೂಕದ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿದ್ದ ಆರೋಪಿಗಳನ್ನು ಮಾಗಡಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ಸುಮಾರು 50 ಲಕ್ಷ ರೂ ಮೌಲ್ಯದ 345.33 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

ದೂರುದಾರರು ಜಾಲಮಂಗಲ ಗ್ರಾಮದಿಂದ ಮಾಗಡಿಗೆ ಹೋಗಲು ಕೆ.ಎಸ್.ಆರ್.ಟಿ.ಸಿ ಬಸ್ ಹತ್ತಿದ್ದರು. ಬಸ್ಸಿನಲ್ಲಿ ತುಂಬಾ ಪ್ರಯಾಣಿಕರಿದ್ದ ಕಾರಣ ನಿಂತು ಪ್ರಯಾಣಿಸುತ್ತಿದ್ದರು. ಬಸ್‌ನಲ್ಲಿ ಕುಳಿದಿದ್ದ ಅಪರಿಚಿತ ಮಹಿಳೆಯೊಬ್ಬರು ಬ್ಯಾಗ್ ಇಟ್ಟುಕೊಳ್ಳುವುದಾಗಿ ತೆಗೆದುಕೊಂಡರು. ಈ ವೇಳೆ ಬ್ಯಾಗ್‌ನಲ್ಲಿದ್ದ 383 ಗ್ರಾಂ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿದ್ದರು. ಈ ವಿಚಾರ ಗೊತ್ತಾದ ನಂತರ ದೂರುದಾರರು ಮಾಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.



ದೂರಿನನ್ವಯ ಪೊಲೀಸರು ತನಿಖೆ ಕೈಗೊಂಡು ಆರೋಪಿಗಳ ಬಗ್ಗೆ ಮಾಹಿತಿ ಕಲೆ ಹಾಕಿ ಒಟ್ಟು ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ನ್ಯಾಯಾಲಯದ ಆದೇಶದ ಮೇರೆಗೆ ವಿಚಾರಣೆ ನಡೆಸಲಾಗಿ, ಸದರಿ ಆರೋಪಿಗಳು ವಿವಿಧ ಪೊಲೀಸ್ ಠಾಣೆಗಳಲಿ 6 ಕಳ್ಳತನ ಪ್ರಕರಣಗಳಲಿ ಭಾಗಿಯಾಗಿದ್ದ ವಿಚಾರ ಬೆಳಕಿಗೆ ಬಂದಿದೆ. ಸದರಿ ಆರೋಪಿಗಳಿಂದ ಪೊಲೀಸರು 345.33 ಗ್ರಾಂ ಚಿನ್ನವನು ವಶಕ್ಕೆ ತೆಗೆದುಕೊಂಡಿದ್ದಾರೆ. ಒಟ್ಟು 10 ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ಮಾಗಡಿ ಪೊಲೀಸ್ ನಿರೀಕ್ಷಕರಾದ ಶ್ರೀನಿವಾಸ್.ಜಿ.ಟಿ, ಪಿ.ಎಸ್.ಐ ಮನೋಜ್.ಎಸ್, ಹೆಚ್‌ಸಿ (182) ರವಿ ಟಿ.ಎಸ್, ಹೆಚ್.ಸಿ (272) ಬೀರಪ್ಪ, ಪಿಸಿ 06 ಮಂಜುನಾಥ್, ಪಿಸಿ 110 ಪ್ರಮೋದ್, ಪಿಸಿ 261 ಮುನೀಂದ್ರ, ಪಿಸಿ 240 ಮಹೇಶ್.ಸಿ , ಮಪಿಸಿ 183 ಶೈಲಜಾ, ಮಪಿಸಿ 183 ರಾಧಮಣಿ, ಪಿಸಿ 406 ಬಸವರಾಜು ಮತ್ತು ಪಿಸಿ ಮಹದೇವ್ ರವರುಗಳ ತಂಡವು ಯಶಸ್ವಿಯಾಗಿರುತ್ತದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ. ಮಾಗಡಿ ಪೊಲೀಸರ ಯಶಸ್ಸಿಗೆ ಎಸ್‌ಪಿ ಶ್ರೀನಿವಾಸ ಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಗಾಳೀಪುರ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ,ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ

ಚಾಮರಾಜನಗರ, ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರ ಬಡಾವಣೆಗೆ ಸಂಪರ್ಕ ಕಲ್ಪಿಸುವ, ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯರಸ್ತೆಯ ಗೊಬ್ಬಳಿಮರದವರಗೆ 4 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ಸಿಎಂ ವಿಶೇಷಾನುದಡಿ ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯರಸ್ತೆಯ ಗೊಬ್ಬಳಿಮರದವರಗೆ ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಯ 2 ಕಾಮಗಾರಿಗಳಿಗೆ 4 ಕೋಟಿ ರೂ.ಮಂಜೂರಾಗಿದೆ. ಈ ಎರಡು ರಸ್ತೆಗಳು ತುಂಬ ಹದಗೆಟ್ಟಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿತ್ತು. ಬಡಾವಣೆಗೆ ಭೇಟಿ ನೀಡಿ, ಪರಿಶೀಲಿಸಿ, ಸುಸಜ್ಜಿತ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ, ವಾರ್ಡಿನ ನಿವಾಸಿಗಳು ಮುಂದೆನಿಂತು, ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು.

ನಗರದ ಕುಡಿಯುವ ನೀರಿನ ಸಮಸ್ಯೆ ನೀಗಿಸಲು



143 ಕೋಟಿ ರೂ.ವೆಚ್ಚದಲ್ಲಿ ಟೆಂಡರ್ ಆಗಿದೆ. ಸದ್ಯದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿಅಧ್ಯಕ್ಷರಾದಸಯ್ಯದ್‌ರಫಿ, ಸುಹೇಲ್ ಅಲಿಖಾನ್, ಮುಖಂಡರಾದ ಆಯುಬ್ ಖಾನ್, ಅಪ್ಸರ್ ಅಹಮದ್,ಹತ್ತಿಕ್ ಅಹಮದ್, ಇಮ್ರಾನ್ ಅಹಮದ್, ಖಲೀಲ್‌ಉಲ್ಲಾ,. ಮಹಮದ್ ಅಮಿಕ್, ರಿಯಾಜ್, ಇಸ್ರಾರ್ ಅಹಮದ್ ಸೇರಿಂತೆ ಬಡಾವಣೆ ನಿವಾಸಿಗಳು ಹಾಜರಿದ್ದರು.

**ವಕೀಲ ಭಾಸ್ಕರ್ ಆರೋಪ**

## ಟ್ರಾಫಿಕ್ ಸಿಗ್ನಲ್ ಬಗ್ಗೆ ಮಾಹಿತಿ ನೀಡದ ಪೊಲೀಸರು

ಮೈಸೂರು: ನಗರದಲ್ಲಿ ಡಿಸೆಂಬರ್ ನಿಂದ ಈಚೆಗೆ ನಿರ್ಮಾಣ ಆಗುತ್ತಿರುವ ಟ್ರಾಫಿಕ್ ಸಿಗ್ನಲ್‌ಗಳ ಕುರಿತಂತೆ ಮಾಹಿತಿ ಹಕ್ಕು ಕಾಯಿದೆಯಡಿ ಕೋರಿದ ಲಿಖಿತ ಮನವಿಗೆ ಪೊಲೀಸರು ಯಾವುದೇ ಉತ್ತರ ನೀಡಿಲ್ಲ. ಈ ಬಗ್ಗೆ ಹದಿನೈದು ದಿನಗಳಲ್ಲಿ ಸಂಬಂಧಿಸಿದವರು ಉತ್ತರ ನೀಡದಿದ್ದರೆ ಲೋಕಾಯುಕ್ತಕ್ಕೆ ದೂರು ದಾಖಲಿಸುವುದಾಗಿ ವಕೀಲ ಭಾಸ್ಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇತ್ತೀಚೆಗೆ ಎಲ್ಲೆಂದರಲ್ಲಿ ಏಕಾಏಕಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಲಾಗಿದೆ. ಇದರಿಂದ ಅನುಕೂಲ ಬದಲು ಸಮಸ್ಯೆಯೇ ಹೆಚ್ಚಾಗಿದೆ. ಹೀಗಾಗಿ ಇವುಗಳನ್ನು ಅಳವಡಿಸುವ ಮುನ್ನ ಯಾವುದಾದರೂ ಸರ್ವೆ ನಡೆದಿದೆಯೇ, ಪಾಲಿಕೆ, ಮುಡಾ, ಭಾರತೀಯ ರಸ್ತೆ ಕಾಂಗ್ರೆಸ್‌ನ ಅನುಮತಿ ಪಡೆಯಲಾಗಿದೆಯೇ ಎಂದು ತಾವು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಳಿದ್ದ ಪ್ರಶ್ನೆಗಳಿಗೆ ಪೊಲೀಸ್ ಆಯುಕ್ತರು ನಕಾರಾತ್ಮಕ ಉತ್ತರ ನೀಡಿದ್ದಾರೆ. ಪೊಲೀಸ್ ಆಯುಕ್ತರಿಗೆ ಆರ್‌ಟಿಐ ಅಡಿಯಲ್ಲಿ ಅರ್ಜಿ ಹಾಕಿ



ಯಾವ ಯಾವ ವೃತ್ತದಲ್ಲಿ ಸರ್ವೆ ನಡೆದಿದೆ. ಎಷ್ಟು ವೆಚ್ಚವಾಗಿದೆ, ಸಂಬಂಧಿಸಿದವರ ಅನುಮತಿ ಪಡೆಯಲಾಗಿದೆಯೇ ಎಂಬಿತ್ಯಾದಿ ಮೊದಲಾದ 14 ಪ್ರಶ್ನೆ ಕೇಳಿದ್ದೆನು. ಆದರೆ ಇದಾವುದರ ಮಾಹಿತಿಯೂ ತಮ್ಮ ಬಳಿ ಇಲ್ಲ ಎಂದು ಆಯುಕ್ತರು ಉತ್ತರ ನೀಡಿ ದ್ದಾರೆ. ಹಾಗಿದ್ದರೆ ಯಾವ ಕಾರಣಕ್ಕೆ ಇಲ್ಲೆಲ್ಲ ಸಿಗ್ನಲ್ ದೀಪ ಅಳವಡಿಸಲಾಗಿದೆ ಎಂಬುದನ್ನು ಇನ್ನು 15 ದಿನಗಳೊಳಗೆ ಆಯುಕ್ತರು ನೀಡಬೇಕು. ಇಲ್ಲದಿದ್ದಲ್ಲಿ ಇಲ್ಲಿ ಭ್ರಷ್ಟಾಚಾರದ ವಾಸನೆ ಕಂಡುಬರುತ್ತಿರುವ ಕಾರಣ ಲೋಕಾಯುಕ್ತರಿಗೆ ದೂರು ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದಲ್ಲದೆ ಇವರು ಪಾಲಿಕೆ, ಮುಡಾ, ಡಿಸಿ ಅನುಮತಿ ಸಹಾ ಪಡೆದಿಲ್ಲ. ಈ ಕುರಿತು ಸಂಬಂಧಿಸಿದವರಿಗೆ ದೂರು ನೀಡಿದಲ್ಲಿ ಸುಮಾರು ಒಂದು ಲಕ್ಷ ರೂ.ವರೆಗೆ ದಂಡ ಸಹಾ ವಿಧಿಸಬಹುದಾಗಿದೆ. ಜೊತೆಗೆ, ಇಲ್ಲಿ ಸಂಭವಿಸಿರುವ ಅಪಘಾತಗಳ ಮಾಹಿತಿ ಕೇಳಿದಾಗ ನೀಡಿರುವ ಉತ್ತರ ಸಮಾಧಾನಕರವಾಗಿಲ್ಲ. ಯಾವುದೇ ಸರ್ವೆ ಸಹಾ ನಡೆಸಿಲ್ಲ. ಸಿಗ್ನಲ್ ದೀಪ ಅಳವಡಿಸುವ ಮುನ್ನ ಟೆಂಡರ್ ಪ್ರಕಟಣೆ ನಡೆದಿಲ್ಲ. ಸಾರ್ವಜನಿಕರ ಅಹವಾಲು ಸಹಾ ಆಲಿಸಿಲ್ಲ. ಹೀಗಾಗಿ ಇಲ್ಲೆಲ್ಲ ಸಮಸ್ಯೆಗಳು ಹೆಚ್ಚಾಗಿರುವ ಕಾರಣ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಬಹುದಾಗಿದೆ. ಆದ್ದರಿಂದ ನಗರ ಪೊಲೀಸ್ ಆಯುಕ್ತರು ಇನ್ನು 15 ದಿನಗಳೊಳಗೆ ತಮ್ಮ ನಿರ್ಧಾರ ಕುರಿತಂತೆ ಉತ್ತರ ನೀಡಬೇಕೆಂದು ಆಗ್ರಹಿಸಿದರು. ಮತ್ತೋರ್ವ ವಕೀಲ ಸಚಿನ್, ಸಾಮಾಜಿಕ ಕಾರ್ಯಕರ್ತ ಪ್ರದೀಪ್ ಇದ್ದರು.

# ನಾಳೆ ರಾಮ ಮಹಾರಥೋತ್ಸವ

## ಆಂಜನೇಯ ಸ್ವಾಮಿ ದೇವಾಲಯದ ಬಳಿಯಿಂದ ಆರಂಭ

ರಾಮನಗರ: ಮಾರ್ಚ್ 28ರ ಶನಿವಾರ ಶ್ರೀ ರಾಮದೇವರ ಮಹಾರಥೋತ್ಸವ ನಡೆಯಲಿದೆ.

ಅಂದು ಬೆಳಿಗ್ಗೆ 10.35ಕ್ಕೆ ರಥೋತ್ಸವ ನಗರದ ಅಗ್ರಹಾರದಲ್ಲಿರುವ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಾಲಯದ ಬಳಿಯಿಂದ ಆರಂಭವಾಲಿದೆ.

ಅಗ್ರಹಾರದ ಮುಖ್ಯ ರಸ್ತೆಯಲ್ಲಿ ಸಾಗುವ ರಥ ಎಂ.ಜಿ.ರಸ್ತೆಯ ಕಾಮಣ್ಣಗುಡಿ ವೃತ್ತವನ್ನು ತಲುಪಲಿದೆ. ಮಧ್ಯಾಹ್ನದ ನಂತರ ರಥ ಪುನಃ ಆರಂಭವಾಗಿ ರಥ ಬೀದಿಗಳಾದ ಎಂ.ಜಿ.ರಸ್ತೆ, ಮುಖ್ಯರಸ್ತೆ, ಛತ್ರದ ಬೀದಿಯಲ್ಲಿ ಸಾಗಿ ಸಂಜೆ ವೇಳೆಗೆ ಶ್ರೀ ರಾಮ ದೇವಾಲಯವನ್ನು ತಲುಪಲಿದೆ.

ಐತಿಹಾಸಿಕ ಪ್ರಸಿದ್ಧವಾದ ಶ್ರೀ ರಾಮದೇವರ ರಥೋತ್ಸವವನ್ನು ವೀಕ್ಷಿಸಲು ಬೆಂಗಳೂರು ದಕ್ಷಿಣ ಜಿಲ್ಲೆ ಸೇರಿದಂತೆ ಮಂಡ್ಯ ಮತ್ತು ಬೆಂಗಳೂರು ನಗರಗಳಿಂದಲೂ ಭಕ್ತರು ಆಗಮಿಸುವರು.

ಸುಮಾರು 50 ಅಡಿ ಎತ್ತರ ಇರುವ ಈ ರಥವನ್ನು ಕಟ್ಟುವ ಕಾರ್ಯ ಭರದಿಂದ ಸಾಗಿದೆ. ರಥದಲ್ಲಿ ಶ್ರೀ ಸೀತಾ, ಲಕ್ಷಣ, ಹನುಮಂತ ಸಹಿತ ಶ್ರೀರಾಮ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಭಕ್ತರು ಜವನ ಮತ್ತು ಬಾಳೆಹಣ್ಣುಗಳನ್ನು ರಥದತ್ತ ಬೀಸಿ ತಮ್ಮ ಭಕ್ತಿಯನ್ನು ಸಮರ್ಪಿಸಿಕೊಳ್ಳುವುದು ವಾಡಿಕೆ. ಮಾರ್ಚ್ 28ರಂದು ನಡೆಯುವ ಶ್ರೀ ರಾಮ ಮಹಾರಥೋತ್ಸವ ರಾಜಭೋವಿ ಮತಸ್ಥರುಗಳ ನೇತೃತ್ವದಲ್ಲಿ ರಥ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.




### ಏಪ್ರಿಲ್ 22ರವರೆಗೆ ಉತ್ಸವಗಳು

ಶ್ರೀರಾಮ ನವಮಿ ಮತ್ತು ರಥೋತ್ಸವದ ಅಂಗವಾಗಿ ಇಲ್ಲಿರುವ ಶ್ರೀರಾಮ ದೇವರ ಬೆಟ್ಟ ಮತ್ತು ಛತ್ರದ ಬೀದಿಯಲ್ಲಿರುವ ಶ್ರೀರಾಮ ದೇವಾಲಯದಲ್ಲಿ ಮಾರ್ಚ್ 19ರಂದು ಯುಗಾದಿ ಹಬ್ಬದ ದಿನದಿಂಲೇ ಧಾರ್ಮಿಕ ಕೈಂಕರ್ಯಗಳು ಆರಂಭವಾಗಿವೆ. ಸೀತಾಕಲ್ಯಾಣೋತ್ಸವ ಯಶಸ್ವಿಯಾಗಿ ನೂರಾರು ಭಕ್ತರ ಸಮ್ಮುಖದಲ್ಲಿ ನೆರೆವೇರಿದೆ. ಶೇಷವಾಹನೋತ್ಸವ, ಪುಷ್ಪಮಂಟಪೋತ್ಸವ, ವೈರಮುಡಿ ಉತ್ಸವಗಳು ನೆರೆವೇರಿವೆ. ಪ್ರಹ್ಲಾದ ಪರಿಪಾಲನೋತ್ಸವ, ಕೀಲು ಕುದುರೆ ಉತ್ಸವ, ಪಲ್ಲಕ್ಕಿ ಉತ್ಸವ, ಶೇಷ ಶಯನ ಉತ್ಸವ, ಸೀತಾರಾಮ ಕಲ್ಯಾಣೋತ್ಸವ, ಹನುಮಂತೋತ್ಸವ, ಕೃಷ್ಣ ತುಲಾಭಾರ, ಚಿಕ್ಕ ಮತ್ತು ದೊಡ್ಡ ಗರುಡೋತ್ಸವ, ಚಿತ್ರ ಮಂಟಪೋತ್ಸವ, ನೂತನ ಪಲ್ಲಕ್ಕಿ ಉತ್ಸವ, ಪಾರ್ಥಸಾರಥಿ ಉತ್ಸವ, ಬೃಂದಾವನೋತ್ಸವ, ಉದ್ಯಾನೋತ್ಸವ, ಜಲ ಕ್ರೀಡೋತ್ಸವ, ಹೀಗೆ ದಿನನಿತ್ಯ ವಿವಿಧ ಉತ್ಸವಗಳು ಮತ್ತು ಕೈಂಕರ್ಯಗಳು ಏಪ್ರಿಲ್ 22ರವರೆಗೆ ಮುಂದುವರೆಯಲಿದೆ. ಈ ಎಲ್ಲಾ ಕೈಂಕರ್ಯಗಳನ್ನು ವಿವಿಧ ಸಂಘ–ಸಂಸ್ಥೆಗಳು, ಕುಟುಂಬಗಳು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೀಗೆ ಸಮಸ್ತರು ಸೇರಿ ನಡೆಸಿಕೊಡುತ್ತಿದ್ದಾರೆ.

### ಡಿಸಿಎಂ, ಸಂಸದರು, ಶಾಸಕರಿಂದ ಶುಭಾಶಯ

**ಶ್ರೀ ರಾಮ ನವಮಿ ಮತ್ತು ಶ್ರೀ ರಾಮದೇವರ ರಥೋತ್ಸವಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಂಸದ ಡಾ.ಸಿ.ಎನ್. ಮಂಜುನಾಥ್, ಶಾಸಕ ಇಕ್ಬಾಲ್ ಹುಸೇನ್, ಮಾಜಿ ಸಂಸದ ಡಿ.ಕೆ.ಸುರೇಶ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಎಲ್ಲ ರಾಜಕೀಯ ಪಕ್ಷಗಳ ಪ್ರಮುಖರು ನಾಗರೀಕರಿಗೆ ಶುಭಶಯಗಳನ್ನು ಕೋರಿದ್ದಾರೆ.**

## ನಾಳೆ ಅಗ್ನಿಬನ್ನಿರಾಯ ಜಯಂತಿ

ಹಾಸನ:– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಾ.23 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಅಗ್ನಿಬನ್ನಿರಾಯ ಸ್ವಾಮಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿದೇವೇಗೌಡ ಘನ ಉಪಸ್ಥಿತರಿರಲಿದ್ದು, ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಗೌರವ ಉಪಸ್ಥಿತರಿ ರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರ ಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ, ಮಾದೇಗೌಡ, ಕೆ, ವಿವೇಕಾನಂದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ, ಬೇಲೂರು ಕ.ಸ.ಪ ಅಧ್ಯಕ್ಷ ಮಂಜೇಗೌಡ ಉಪನ್ಯಾಸ ನೀಡಲಿದ್ದಾರೆ.

**ಕರ್ನಾಟಕ ಸರ್ಕಾರ**
**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮಂಡ್ಯ**
**ಸಂ: 33/2025–2026** **ದಿನಾಂಕ: 24.03.2026**

**ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಅಲ್ಪಾವಧಿಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರುಗಳ ಕಾಮಗಾರಿಗಳಿಗಾಗಿ ಅರ್ಹಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-1/2/3/4** ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https:// kppp.karnataka.gov.in** ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು.

**ಕ್ರ.ಸಂ. (1) ರಿಂದ (3), (5), (8) ರಿಂದ (14) ರ ಕಾಮಗಾರಿಗಳಿಗೆ ಮಾತ್ರ]**

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ **ದಿನಾಂಕ: 07.04.2026ರಂದು ಬೆಳಿಗ್ಗೆ 11–00** ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು **ದಿನಾಂಕ:26.03.2026 ರಿಂದ** ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ; 15.04.2026 ಬೆಳಿಗ್ಗೆ 11.00** ಘಂಟೆವರೆಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:16.04.2026 ಸಂಜೆ 4.30** ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17.04.2026 ಸಂಜೆ 4.31** ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ **ದಿನಾಂಕ: 18.04.2026 ಬೆಳಿಗ್ಗೆ 11.00 ಗಂಟೆಗೆ** ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 6/9 ತಿಂಗಳು ಒಟ್ಟು 11 (ಹನ್ನೊಂದು) ಕಾಮಗಾರಿಗಳು,

**ಕ್ರ.ಸಂ. (4) (6) ರಿಂದ (7), (15) ರಿಂದ (22) ಕಾಮಗಾರಿಗಳಿಗೆ ಮಾತ್ರ]**

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ **ದಿನಾಂಕ:31.03.2026ರಂದು ಬೆಳಿಗ್ಗೆ 11–00** ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು **ದಿನಾಂಕ 26.03.2026 ರಿಂದ** ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ 02.04.2026 ಬೆಳಿಗ್ಗೆ 11.00 ಘಂಟೆವರೆಗೆ,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04.04.2026 ಸಂಜೆ 4.30** ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 06.04.2026 ಬೆಳಿಗ್ಗೆ 11.00** ಘಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ **ದಿನಾಂಕ:07.04.2026 ಬೆಳಿಗ್ಗೆ 11.00 ಗಂಟೆಗೆ** ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ **2/3/6/12 ತಿಂಗಳು** ಒಟ್ಟು **11 (ಹನ್ನೊಂದು)** ಕಾಮಗಾರಿಗಳು,

ಸದರಿ ಕಾಮಗಾರಿಗಳ ಪೈಕಿ **ಗರಿಷ್ಠ ಅಂದಾಜು ಮೊತ್ತ ರೂ.890.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.5.00 ಲಕ್ಷಗಳು ಇ.ಎಂ.ಡಿ.** ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

**ಟಿಪ್ಪಣಿ:**
**1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.**
**2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.**

**ಸಹಿ/– ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ**

# ತಮಿಳುನಾಡು ಚುನಾವಣೆ ಹಿನ್ನೆಲೆ

## ಗಡಿಭಾಗದಲ್ಲಿ ಅಬಕಾರಿ ವಿಚಕ್ಷಣ ದಳ ರಚನೆ



**ರಾಮನಗರ:** ನವದೆಹಲಿಯ ಕೇಂದ್ರ ಚುನಾವಣಾ ಆಯೋಗದ ಸೂಚನೆ ಹಾಗೂ ಕರ್ನಾಟಕ ರಾಜ್ಯ ಅಬಕಾರಿ ಆಯುಕ್ತರ ನಿರ್ದೇಶನದಂತೆ ತಮಿಳುನಾಡು ವಿಧಾನಸಭೆ ಚುನಾವಣೆ2026 ಹಿನ್ನೆಲೆಯಲ್ಲಿ ಗಡಿಭಾಗಗಳಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ವಿಚಕ್ಷಣ ದಳ (ಫ್ಲೈಯಿಂಗ್ ಸ್ಕ್ವಾಡ್) ರಚಿಸಲಾಗಿದೆ. ಈ ದಳವು ಮೇ 5, 2026 ರವರೆಗೆ ಕಾರ್ಯನಿರ್ವಹಿಸಲಿದೆ.

ಜಿಲ್ಲಾ ವಿಚಕ್ಷಣ ದಳದಲ್ಲಿ ಅಬಕಾರಿ ನಿರೀಕ್ಷಕ ರಾಜಪ್ಪ ಜಿ.ಎಸ್ ಹಾಗೂ ಪೇದೆ ಇಂದ್ರೇಶ್ (ವಾಹನ ಸಂಖ್ಯೆ: ಕೆಎ–42–ಜಿ–1210, ಮೊ.: 9964953966) ಮತ್ತು ರಾಮನಗರ ಉಪವಿಭಾಗದ ಅಬಕಾರಿ ನಿರೀಕ್ಷಕಿ ಸುಧಾ ಕೆ.ಜೆ ಹಾಗೂ ಪೇದೆ ಚಂದ್ರಶೇಖರ್ (ವಾಹನ ಸಂಖ್ಯೆ: ಕೆಎ–42–ಜಿ–1211, ಮೊ.: 9611878317) ನಿಯೋಜಿಸಲಾಗಿದೆ.

ಈ ತಂಡಗಳು ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ವಲಯ ವ್ಯಾಪ್ತಿಯ ತಮಿಳುನಾಡು ಗಡಿಭಾಗಗಳಲ್ಲಿ ದಾಳಿ ನಡೆಸಿ ಅಬಕಾರಿ ಅಕ್ರಮಗಳನ್ನು ಪತ್ತೆಹಚ್ಚಿ, ನಿಯಮಾನುಸಾರ ಕ್ರಮ ಕೈಗೊಂಡು ವರದಿ ಸಲ್ಲಿಸಲಿವೆ.

ಗಡಿಭಾಗಗಳಲ್ಲಿ ರಸ್ತೆಗಸ್ತು, ರಸ್ತೆಗಾವಲುಗಳನ್ನು ಬಿಗಿಗೊಳಿಸಿ ಅನುಮಾನಾಸ್ಪದ ವಾಹನಗಳ ತಪಾಸಣೆ ನಡೆಸಲಾಗುತ್ತದೆ. ಅಕ್ರಮ ಮದ್ಯ ಮತ್ತು ಮದ್ಯಸಾರ ಸಾಗಾಟ ತಡೆಯಲು ವಿಶೇಷ ಗಮನ ಹರಿಸಲಾಗುತ್ತದೆ. ಜೊತೆಗೆ, ಹಿಂದಿನ ಪ್ರಕರಣಗಳ ಸ್ಥಳಗಳು, ಪಾಳುಬಿದ್ದ ಕಟ್ಟಡಗಳು, ಮನೆಗಳು, ಫಾರ್ಮ್‌ಹೌಸ್‌ಗಳು ಹಾಗೂ ರೆಸಾರ್ಟ್‌ಗಳ ಬಳಿ ಗಸ್ತು ಹೆಚ್ಚಿಸಿ ಮದ್ಯದ ಅಕ್ರಮ ದಾಸ್ತಾನು ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ.

ತಂಡದ ಅಧಿಕಾರಿಗಳು ಮತ್ತು ಸಿಬ್ಬಂದಿ ಯಾವುದೇ ರಜೆ ಪಡೆಯದೇ ಕಾರ್ಯನಿರ್ವಹಿಸಬೇಕು. ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ರಜೆ ಬಳಸಬೇಕು. ಚುನಾವಣಾ ಅವಧಿಯಲ್ಲಿ ಮೊಬೈಲ್ ದೂರವಾಣಿ ಸದಾ ಚಾಲನೆಯಲ್ಲಿರಬೇಕು ಹಾಗೂ ಯಾವಾಗ ಬೇಕಾದರೂ ಸಂಪರ್ಕಕ್ಕೆ ಸಿಗುವಂತಿರಬೇಕು. ಸರ್ಕಾರಿ ವಾಹನಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಸೂಚಿಸಲಾಗಿದೆ.

ಈ ಎಲ್ಲಾ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಿತ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಅಬಕಾರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೌಶಲ್ಯಾಭಿವೃದ್ಧಿಯಿಂದ ಸ್ವ–ಉದ್ಯೋಗ: ಉದಯಕುಮಾರ್

**ಮೈಸೂರು:** ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿಯೊಂದಿಗೆ ಸ್ವಉದ್ಯೋಗದತ್ತ ಗಮನಹರಿಸುವುದು ಇಂದಿನ ಅವಶ್ಯಕತೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಉದಯಕುಮಾರ್ ಹೇಳಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ವಸಂತ್ ಮಹಲ್‌ನಲ್ಲಿ ಆಯೋಜಿಸಲಾದ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಹಾಗೂ ಕೆರಿಯರ್ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಜಗತ್ತು ಅತ್ಯಂತ ಸ್ಪರ್ಧಾತ್ಮಕ ವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ವೃತ್ತಿ ಮಾರ್ಗದರ್ಶನ ಬಹಳ ಮುಖ್ಯವಾಗಿದೆ. ವಿದ್ಯಾಭ್ಯಾಸದ ನಂತರ ವೃತ್ತಿ ಜೀವನವನ್ನು ಹೇಗೆ ಆರಂಭಿಸಬೇಕು ಅಥವಾ ವೇಗವಾಗಿ ಯಶಸ್ಸು ಪಡೆಯಲು ಯಾವ ಹಾದಿ ಹಿಡಿಯಬೇಕು ಎಂಬ ಗೊಂದಲ ವಿದ್ಯಾರ್ಥಿಗಳಲ್ಲಿ ಸಹಜವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಕೇವಲ ಕೋರ್ಸ್ ಆಧಾರಿತ ಉದ್ಯೋಗಗಳ ಹಿಂದೆ ಹೋಗುವುದಕ್ಕಿಂತ ಪರ್ಯಾಯವಾಗಿ ಸ್ವಉದ್ಯೋಗಗಳತ್ತ ಗಮನ ಹರಿಸಬೇಕು. ಕೌಶಲ್ಯ, ಸ್ಪಷ್ಟ ಗುರಿ ಹಾಗೂ ಕ್ರಿಯಾಶೀಲತೆ ಇಲ್ಲದಿದ್ದರೆ ಇಂತಹ ಮೇಳಗಳು ಫಲಪ್ರದವಾಗುವುದಿಲ್ಲ. ತಮ್ಮ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಸಾಧನೆ ಮಾಡಲು ಅಗತ್ಯ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಬಿ.ಇಡಿ ಕಾಲೇಜಿನ ಕಿರಿಯ ರೀಡರ್ ಅಮಿತ್ ಮಾತನಾಡಿ, ವೃತ್ತಿ ಮೇಳವು ನಮ್ಮ ಇಲಾಖೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು. ದೇಶದ ದೊಡ್ಡ ಸಮಸ್ಯೆ ನಿರುದ್ಯೋಗ. ಆದರೆ ಅದರ ಮೂಲ ಕಾರಣ ಜನಸಂಖ್ಯೆ ಅಲ್ಲ, ಕೌಶಲ್ಯಗಳ ಕೊರತೆ. ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕು, ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 22 ಇಲಾಖೆಗಳ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ವಿವಿಧ ಶಾಲಾ–ಕಾಲೇಜುಗಳಿಂದ 1255 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ನಂತರ ಯಾವ ವಿಷಯ ಹಾಗೂ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಐಟಿಐನ ಜೂನಿಯರ್ ಟ್ರೈನಿಂಗ್ ಆಫೀಸರ್ ಅರವಿಂದ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ನಾಗಮ್ಮ, ಡಯಟ್ ನೋಡಲ್ ಅಧಿಕಾರಿ ಚಂದ್ರಶೇಖರ್ ಕೆ.ಎಚ್. ಹಾಗೂ ಲೆಕ್ಕ ಅಧೀಕ್ಷಕ ಮಧು ಬಿ.ಆರ್. ಸೇರಿದಂತೆ ಇತರರು ಉಪಸ್ಥಿತರಿದ್ದರು.



# ರಾಜ್ಯ ಸರ್ಕಾರ ಭ್ರಷ್ಟ ಅಧಿಕಾರಿಗಳ ರಕ್ಷಣಗೆ ನಿಂತಿದೆ: ಜಿ.ಆರ್.ಜಯಣ್ಣ



**ಕೆ.ಆರ್.ಪೇಟೆ:** ಹೇಮಾವತಿ ಎಡದಂಡೆ ನಾಲೆಯ ಆಧುನೀಕರಣ ಕಾಮಗಾರಿಯಲ್ಲಿ 500 ಕೋಟಿ ರೂಗಳಿಗೂ ಅಧಿಕ ಅಕ್ರಮ ನಡೆದಿದ್ದು ನಡೆದಿರುವ ಅಕ್ರಮಗಳ ಬಗ್ಗೆ ದಾಖಲೆ ಸಮೇತ ದೂರು ನೀಡಿದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ವಹಿಸದೆ ಅಕ್ರಮ ಮಾಡಿರುವ ಎಂಜಿನಿಯರುಗಳ ಪರ ನಿಂತಿದೆ. ಭ್ರಷ್ಟಾಚಾರ ನಿಯಂತ್ರಿಸಿ ಗುಣಮಟ್ಟದ ಕಾಮಗಾರಿಗಳಿಗೆ ಆದ್ಯತೆ ನೀಡಬೇಕಾಗಿದ್ದ ರಾಜ್ಯ ಸರ್ಕಾರವೇ ಭ್ರಷ್ಟ ಎಂಜಿನಿಯರುಗಳ ರಕ್ಷಣೆಗೆ ನಿಂತಿದ್ದು ರಾಜ್ಯದಲ್ಲಿ ಬೇಲಿಯೇ ಎದ್ದು ಹೊಲ ಮೇಯುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಜಿ.ಆರ್.ಜಯಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪಟ್ಟಣದಲ್ಲಿಂದು ಅವ್ಯವಹಾರದ ದಾಖಲೆಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಜಯಣ್ಣ ಸಿದ್ದರಾಮಯ್ಯ ಅವರು ಮೊದಲ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಹೇಮಾವತಿ ಎಡದಂಡೆ ನಾಲೆಯ ಸರಪಳಿ 72.260 ರಿಂದ ಸರಪಳಿ 214.300 ರ ವರೆಗೆ ನಾಲೆಯ ಆಧುನೀಕರಣಕ್ಕೆ 883.50 ಕೋಟಿ ಹಣ ಬಿಡುಗಡೆ ಮಾಡಿದ್ದರು. ಮುಂದಿನ ದಿನಗಳಲ್ಲಿ ಈ ಕಾಮಗಾರಿಯ ವೆಚ್ಚ ಒಂದು ಸಾವಿರ ಕೋಟಿ ದಾಟಿತು.

ವಿಜಯಪುರ ಜಿಲ್ಲೆಯ ಪ್ರಥಮ ದರ್ಜೆ ಗುತ್ತಿಗೆದಾರ ಎಂ.ವೈ. ಕಟ್ಟಿಮನಿ ಎನ್ನುವವರು 2018 ನೇ ಸಾಲಿನಲ್ಲಿ ಕಾಮಗಾರಿ ಆರಂಭಿಸಿ 2021 ನೇ ಸಾಲಿನಲ್ಲಿ ಪೂರ್ಣಗೊಳಿಸಿದರು. ನಿಯಮಾನುಸಾರ ನಾಲಾ ಏರಿಯ ಮೇಲೆ ಜೀವ ರಕ್ಷಕ ಗಾರ್ಡ್ ಸ್ಟೋನ್ ಅಳವಡಿಸದೆ, ನಾಲಾ ಏರಿಗೆ ಗ್ರಾವಲ್ ಮಣ್ಣು ಹಾಕದೆ, ಅಗತ್ಯವಿರುವಲ್ಲಿ ಬಂಡಿ ಸೇತುವೆಗಳನ್ನು ನಿರ್ಮಿಸದೆ, ಕ್ಯಾಟಲ್ ರ?ಯಾಂಪ್, ಸೈಡ್ ವಾಲ್, ಕಟ್ ಅಫ್ ವಾಲ್, ಟೋವಾಲ್, ಪಿಚ್ಚಿಂಗ್ ಮಾಡದೆ, ಸೂಪರ್ ಪ್ಯಾಸೇಜ್ ಬಳಿ ಹಾರ್ಡ್ ಪಾಥ್ ನಿರ್ಮಿಸದೆ ಮುಂತಾದ ಹತ್ತು ಹಲವು ಕಾಮಗಾರಿಗಳನ್ನು ನಿರ್ವಹಿಸದೆ ಪುಕ್ಕಟೆ ಬಿಲ್ ಮಾಡಿಕೊಂಡು ಸುಮಾರು 500 ಕೋಟಿ ರೂಗಳಿಗೂ ಅಧಿಕ ಹಣವನ್ನು ಲೋಟಿ ಮಾಡಲಾಗಿದೆ. ಅವ್ಯವಹಾರಕ್ಕೆ ಸಹಕರಿಸಿದ ಎಂಜಿನಿಯರುಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಂಪೂರ್ಣ ದಾಖಲೆಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಈ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರಿಗೂ ದೂರು ನೀಡಿದರೂ ಭ್ರಷ್ಟರ ಮೇಲೆ ಯಾವುದೇ ಕ್ರಮವಾಗಿಲ್ಲ.

ಮಂಡ್ಯ ಲೋಕಾಯುಕ್ತ ಪೊಲೀಸ್ ನಿರೀಕ್ಷಕರಾದ ಬಿ.ಪಿ.ಬ್ಯಾಟರಾಯಗೌಡರು ನಾವು ನೀಡಿದ ದೂರಿನ ಮೇರೆಗೆ ನಾಲಾ ಏರಿಗಳ ಮೇಲೆ ಖುದ್ದು ಸಂಚರಿಸಿ ನಾಲಾ ಆಧುನೀಕರಣ ಕಾಮಗಾರಿಯಲ್ಲಿನ ಲೋಪಗಳನ್ನು ಎತ್ತಿ ಹಿಡಿದು ವರದಿ ನೀಡಿದ್ದಾರೆ. ಆದರೆ ರಾಜ್ಯ ಸರ್ಕಾರ ನೇಮಕ ಮಾಡಿದ್ದ ಎಂ.ಕೆ.ವೆಂಕಟರಾಮ್ ಎನ್ನುವ ಸತ್ಯಶೋಧನಾ ಸಮಿತಿಯ ತಜ್ಞ ಕಾಮಗಾರಿಯಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಸುಳ್ಳು ವರದಿ ನೀಡಿ ಭ್ರಷ್ಟರ ಪರ ಬ್ಯಾಟಿಂಗ್ ಮಾಡಿದ್ದಾರೆ. ನಮ್ಮ ಸತತ ಒತ್ತಡದ ಮೇರೆಗೆ ಭ್ರಷ್ಟ ಎಂಜಿನಿಯರುಗಳ ವಿರುದ್ಧ ಕ್ರಮ ವಹಿಸಲು ರಾಜ್ಯ ಜಲಸಂಪನ್ಮೂಲ ಇಲಾಖೆಯ ಮುಖ್ಯ ಕಾರ್ಯದರ್ಶಿಗಳು ನೀಡಿದ್ದ ಪೂರ್ವಾನುಮತಿ ಪತ್ರವನ್ನು ಇದೀಗ ಹಿಂಪಡೆದಿದ್ದು ಇದರ ಹಿಂದೆ ತಿಪಟೂರು ತಾಲೂಕಿನ ಪ್ರತಿಷ್ಠಿತ ಮಠವೊಂದರ ಕೈವಾಡ ಇರುವುದಕ್ಕೆ ನನ್ನ ಬಳಿ ಆಡಿಯೋ ಸಾಕ್ಷಿಗಳಿವೆ. ಅಕ್ರಮ ಎಸೆಗಿರುವವರ ವಿರುದ್ಧ ಕ್ರಮ ವಹಿಸಲು ಲೋಕಾಯುಕ್ತರು ಮುಂದಾಗುವಷ್ಟರಲ್ಲಿಯೇ ಭ್ರಷ್ಟ ನೌಕರರು ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು ಲೋಕಾಯುಕ್ತ ತನಿಖೆಗೆ ಹಿನ್ನಡೆಯಾಗಿದೆ.

ಈ ನಡುವೆ ನಾವು ನೀಡಿರುವ ದೂರು ಹಿಂಪಡೆಯಲು ರಾಜ್ಯ ಸರ್ಕಾರದ ಪ್ರಭಾವಿ ಎಂಜಿನಿಯರ್ ಕೆ.ಎಂ.ಬಿಂದಿ ಎನ್ನುವವರು ನನಗೆ 40 ಲಕ್ಷ ರೂಗಳ ಲಂಚದ ಆಮಿಷ ಒಡ್ಡಿದ್ದು ಇದರ ಬಗ್ಗೆ ನಾನು ಈಗಾಗಲೇ ನನ್ನ ಬಳಿಯಿರುವ ಆಡಿಯೋ ದಾಖಲೆಯ ಮೂಲಕ ಮಂಡ್ಯ ಲೋಕಾಯುಕ್ತರಿಗೆ ದೂರು ನೀಡಿದ್ದೇನೆ ಎಂದಿರುವ ಜಯಣ್ಣ ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಸಾಮಾಜಿಕ ಕಳಕಳಿಯಿದ್ದರೆ ತಕ್ಷಣವೇ ಹೇಮಾವತಿ ಎಡದಂಡೆ ನಾಲಾ ಆಧುನೀಕರಣ ಕಾಮಗಾರಿಯಲ್ಲಿನ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದರು. ರೈತ ಹೋರಾಟಗಾರ ಪಿ.ಬಿ.ಮಂಚನಹಳ್ಳಿ ನಾಗೇಗೌಡ, ಕರೋಟಿ ರವಿ, ರಾಮಣ್ಣ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ತಂಬಾಕು ಮುಕ್ತ ಮಂಡ್ಯ ಗುರಿ: ಡೀಸಿ

**ಮಂಡ್ಯ:** ಜಿಲ್ಲೆಯನ್ನು ತಂಬಾಕು ಮುಕ್ತ ಜಿಲ್ಲೆಯನ್ನಾಗಿ ರೂಪಿಸುವ ಉದ್ದೇಶದಿಂದ ಶಾಲಾ ಮಕ್ಕಳ ಮೂಲಕ ಪತ್ರ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸುಮಾರು 75 ಸಾವಿರ ಪತ್ರಗಳನ್ನು ಕುಟುಂಬ ಸದಸ್ಯರಿಗೆ ಬರೆದು ಅರಿವು ಮೂಡಿಸುವ ಕಾರ್ಯ ಯಶಸ್ವಿಯಾಗಿ ನಡೆದಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದ್ದಾರೆ.

ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮ ಪಂಚಾಯಿತಿ ಮತ್ತು ನಗರಸಭೆ ಹಂತದಲ್ಲಿಯೂ ತಂಬಾಕು ಮುಕ್ತ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಶಾಲೆ, ಕಾಲೇಜು ಮತ್ತು ಆಸ್ಪತ್ರೆಗಳ 100 ಮೀಟರ್ ವ್ಯಾಪ್ತಿಯೊಳಗೆ ತಂಬಾಕು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ನಡೆಸಿ, ನಿಯಮ ಉಲ್ಲಂಘಿಸಿದರೆ ಪರವಾನಗಿ (ಲೈಸೆನ್ಸ್) ರದ್ದುಪಡಿಸಲು ಸೂಚಿಸಿದರು. ಚಿತ್ರಮಂದಿರಗಳಲ್ಲಿ ತಂಬಾಕು ಸೇವನೆಯನ್ನು ಉತ್ತೇಜಿಸುವ ಭಾವಚಿತ್ರಗಳು ಅಥವಾ ಪೋಸ್ಟರ್‌ಗಳನ್ನು ಅಳವಡಿಸಬಾರದು. ಈ ನಿಯಮವನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದರು. ಸಭೆಯಲ್ಲಿ ಜಿಲ್ಲಾ ಜಾರಿ ಅಧಿಕಾರಿ ಡಾ. ಬೆಟ್ಟಸ್ವಾಮಿ, ಐಎನ್‌ಎ ಅಧ್ಯಕ್ಷ ಡಾ. ಮರಿಗೌಡ, ನಗರಸಭೆಯ ಪರಿಸರ ಅಭಿಯಂತರ ರುದ್ರೇಗೌಡ ಹಾಗೂ ಜಿಲ್ಲಾ ಸಲಹೆಗಾರ ತಿಮ್ಮಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ರಾಮ ನಾಮ ಜಪದ ಮಹಿಮೆ


ರಾಮ ಶಬ್ದದ ಅರ್ಥ ರಮಯತೇ ಇತಿ ರಾಮಂ, ಮನಸ್ಸಿಗೆ ಆನಂದ ನೀಡುವಂತಹದ್ದು ಎಂಬುದು ರಾಮ ಪದದ ಅರ್ಥವಾಗಿದೆ. ಭಗವಂತನ 7ನೇ ಅವತಾರವೇ ರಾಮಾವತಾರ. ರಾಮಾವತಾರದಲ್ಲಿ ಮನುಷ್ಯ ಜನ್ಮವನ್ನು ತಳೆದ ಭಗವಂತ ಮನುಷ್ಯನಾದವನು ಹೇಗೆಲ್ಲ ಬದುಕಬೇಕ ಎಂದು ತೋರಿಸಿ ಮನುಷ್ಯ ಜನ್ಮದಲ್ಲಿ ನಾವು ಅನುಸರಿಸಬೇಕಾದ ಜೀವನಶೈಲಿ ಮತ್ತು ಆದರ್ಶವನ್ನು ಜಗತ್ತಿಗೆ ತೋರಿಸಿ ನಮಗೆ ಮಾರ್ಗದರ್ಶಕನಾಗಿ ಜೀವನವನ್ನು ನಡೆಸಿದ್ದಾನೆ. ಸರ್ವಶಕ್ತನಾದ ಪರಮಾತ್ಮನು ಮನುಷ್ಯ ಜನ್ಮದಲ್ಲಿ ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ, ಗುರುಹಿರಿಯರಿಗೆ ಗೌರವ ಕೊಟ್ಟು ಅವರ ಆದೇಶಗಳನ್ನು ಸದಾ ಪಾಲಿಸುತ್ತಾ, ಏಕ ಪತ್ನಿ ವ್ರತಸ್ಥ%ನಾಗಿ, ಕ್ಷತ್ರೀಯ ಧರ್ಮದ ಪಾಲನೆ ಮಾಡುತ್ತಾ ಅಸಹಾಯಕರಿಗೆ ಸಹಾಯ ಮಾಡುತ್ತಾ ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣ ಮಾಡುತ್ತಾ ಆದರ್ಶ ಜೀವನದ ಮಾರ್ಗವನ್ನು ಪ್ರಪಂಚಕ್ಕೆ ತೋರಿಸಿದವನು. 4 ಯುಗಗಳಲ್ಲಿ ತ್ರೇತಾಯುಗದಲ್ಲಿ ಜನಿಸಿದ ರಾಮನು ಕಲಿಯುಗದ ಜನರಿಗೆ ಆದರ್ಶವನ್ನು ತೋರಿಸಿ ದೇವರಾಗಿ ಮನುಷ್ಯನನ್ನು ಉದ್ಧರಿಸಿದ ಶ್ರೀರಾಮಚಂದ್ರನ ನಾಮದ ಮಹಿಮೆ ಬಹಳವೇ ಇದೆ.


ಬೇಡನಾಗಿದ್ದ ವಾಲ್ಮೀಕಿ ನಾರದರ ಬೋಧನೆಯಿಂದ ರಾಮನಾಮ ಜಪವನ್ನು ಮಾಡುತ್ತ ರಾಮನಾಮದ ಮಹಿಮೆಯ ಬಲದಿಂದಲೇ ಮಹರ್ಷಿಯಾದ ಎಂದು ಹೇಳಲಾಗುತ್ತದೆ. ಭಾರತೀಯರಲ್ಲಿ ನಾಮ ಸಂಕೀರ್ತನೆಗೆ ಬಹಳ ದೊಡ್ಡ ಸ್ಥಾನವನ್ನು ಕೊಡಲಾಗಿದೆ. ಯಾವುದೇ ನಿಯಮಿತವಾದ ಜಪಾನುಕ್ರಮವನ್ನು ಅನುಸರಿಸದೇ ಯಾವುದೇ ಸ್ಥಳದ ಶುದ್ಧಿಯನ್ನು ಪಾಲಿಸದೇ ಹಾಸಿಗೆಯ ಮೇಲೆ ಮಲಗಿದ್ದರೂ ಮಾಡ ಬಹುದಾದ ಜಪ ಒಂದಿದೆ ಎಂದರೆ ಅದು ಕೇವಲ ಶ್ರೀರಾಮನಾಮ ಜಪವಾಗಿದೆ. "ಶ್ರೀರಾಮ ಜಯರಾಮ ಜಯ ಜಯ ರಾಮ" ಎಂಬುದು ರಾಮ ತಾರಕ ಮಂತ್ರ. ಸೀತಾಮಾತೆಯನ್ನು ಹುಡುಕಲು ಹೊರಟ ಹನುಮಂತನು ಅಶೋಕವನದ ಮರದ ಮೇಲೆ ಕುಳಿತು ಸೀತಾದೇವಿಗೆ ತಾನು ರಾಮ ಭಕ್ತನೆಂದು ತಿಳಿಸಲು ರಾಮನಾಮ ಜಪವನ್ನೇ ಮಾಡುತ್ತಾನೆ. ವಿಭೀಷಣ ಧರ್ಮ ಪರಾಯಣ ಸಾತ್ವಿಕ ಎಂದು ಹನುಮಂತನು ಅವನ ರಾಮನಾಮ ಜಪದ ಮೂಲಕವೇ ತಿಳಿಯುತ್ತಾನೆ. ಇದು ರಾಮಾಯಣ ಕಾಲದ ರಾಮನಾಮ ಜಪದ ಮಹತ್ವವಾಗಿದೆ. ಇಷ್ಟೇ ಏಕೆ ರಾವಣನು ಸೀತೆಯನ್ನು ಅಪಹರಿಸಿದಾಗ ರೂಪ ಬದಲಿಸಿದಂತೆ ಅವಳನ್ನು ಒಲಿಸಿಕೊಳ್ಳಲು ರಾಮನ ವೇಷವನ್ನು ಧರಿಸಿ ಪ್ರಯತ್ನ ಮಾಡುವಂತೆ ಅವನ ಅಸುರ ಬಂಧುಗಳು ಸಲಹೆ ನೀಡಿದಾಗ ರಾವಣನು ಹೇಳುತ್ತಾನೆ, ರಾಮನ ವೇಷವನ್ನು ಧರಿಸಿದಾಗ ನನ್ನ ಮನದಲ್ಲಿ ಮನೋವಿಕಾರಗಳು ಆಗದೇ ಪರಸ್ತ್ರೀಯರನ್ನು ನೋಡಬಾರದೆಂಬ ಎಚ್ಚರಿಕೆ ಮನಸ್ಸಿಗೆ ಬರುತ್ತದೆ ಎನ್ನುತ್ತಾನೆ. ಇಂತಹ ಮಹಿಮೆ ರಾಮನಲ್ಲಿದೆ.

ಪದ್ಮ ಪುರಾಣದಲ್ಲಿ ಶಿವನು ಪಾರ್ವತಿಗೆ ರಾಮನಾಮದ ಮಹಿಮೆಯ ಬೋಧನೆಯನ್ನು ಮಾಡುತ್ತಾನೆ. ನೀನೇ ಪ್ರಪಂಚದ ಒಡೆಯನಾಗಿದ್ದೂ ಏಕೆ ರಾಮನಾಮ ಜಪ ಮಾಡುತ್ತಿರುವೀ ಎಂದು ಪಾರ್ವತಿ ದೇವಿಯು ಕೇಳಿದಾಗ ಈಶ್ವರನು ನಾನು ವಿಷ್ಣುವಿನ ಆಜ್ಞೆಯಂತೆ ವಿಷ್ಣು ಸಹಸ್ರನಾಮವನ್ನು ಜಪಿಸುತ್ತಿರುವೆ.

ರಾಮನಾಮ ಜಪ ಮಾಡುವುದರಿಂದ ವೈಷ್ಣವ ವ್ರತ ಆಚರಿಸಿದಂತೆ ಎಂದು ಹೇಳಿ, ರುದ್ರದೇವರು ಪಾರ್ವತಿ ದೇವಿಗೆ ವಿಷ್ಣು ಸಹಸ್ರನಾಮದ ಉಪದೇಶ ಮಾಡುತ್ತಾರೆ. ಆಗ ಈ ವ್ರವನ್ನು ಮಾಡುತ್ತಿರುವಾಗ ನಿತ್ಯವೂ ಊಟಕ್ಕೆ ಮೊದಲು ವಿಷ್ಣು ಸಹಸ್ರನಾಮ ಪರಾಯಣ ಮಾಡದೇ ಊಟ ಮಾಡುತ್ತಿರುವುದಿಲ್ಲ. ಏಕಾದಶೀಯ ಮಾರನೆ ದಿನ ಮುಂಜಾನೆ ದ್ವಾದಶೀಯಂದು ಶಿವನು ಪಾರ್ವತಿಯನ್ನು ಊಟಕ್ಕೆ ಕರೆದಾಗ ವಿಷ್ಣು ಸಹಸ್ರನಾದ ಪಾರಾಯಣವಾಗದ ಕಾರಣ ತಾನು ಊಟ ಮಾಡುವುದಿಲ್ಲ ಎಂದು ಗೌರಿಯು ಹೇಳಿದಾಗ ರುದ್ರದೇವರು "ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ ಸಹಸ್ರ ನಾಮ ತತ್ತುಲ್ಯಂ ರಾಮನಾಮ ವರಾನನೇ" ಎಂದು ಹೇಳಿ ರಾಮನಾಮ ಜಪವು ವಿಷ್ಣು ಸಹಸ್ರನಾಮ ಜಪದ ಫಲವನ್ನೇ ನೀಡುತ್ತದೆ ಎಂದು ಹೇಳುತ್ತಾರೆ. ರಾಮ ನಾಮ ಜಪವು "ಲೌಕಿರಾಃ, ವೈದಿಕಾಃ ಶಬ್ದಾಃ ಯೇ ಕೇಚಿತ್ಸಂತಿ ಪಾರ್ವತಿ। ನಾಮಾನಿ ರಾಮಚಂದ್ರಸ್ಯ ಸಹಸ್ರಂ ಥೇಷು ಚಾದಿಕಂ॥ ಜಪತಃ ಸರ್ವಮಂತ್ರಾಶ್ಚ ಸರ್ವ ವೇದಾಂಶ್ಚ ಪಾರ್ವತಿ। ತಸ್ಮಾತ್ ಕೋಟಿ ಗುಣ ಪುಣ್ಯಂ ರಾಮನಾಮ್ನೈವ ಲಭ್ಯತೇ॥ ಎಂದು ಹೇಳುತ್ತಾರೆ. ದಾಸರು ಕೂಡ ರಾಮಮಂತ್ರವ ಜಪಿಸೋ ಹೇ ಮನುಜಾ , ಆ ಮಂತ್ರ ಈ ಮಂತ್ರ ಜಪಿಸಿ ಕೆಡಲು ಬೇಡ ಎಂದಿದ್ದಾರೆ. ರಾಮನಾಮ ಜಪದ ಮಹಿಮೆಯನ್ನು ಸಾರುವ ಅನೇಕ ಅನುಭವದ ಕಥೆಗಳು ಇವೆ. ತ್ರೇತಾಯುಗದಿಂದಲೂ ಕಲಿಯುಗದವರೆಗೂ ಅನೇಕ ಪವಾಡಗಳು ರಾಮನಾಮದಿಂದ ಜಪ ಮತ್ತು ರಾಮನ ಆರಾಧನೆಯ ಕಥೆಗಳನ್ನು ಕೇಳುತ್ತೇವೆ.

ರಾಮನಾಮ ಜಪದಿಂದ ಮನಸ್ಸಿನ ಆತಂಕ, ದುಃಖ ಮತ್ತು ಖಿನ್ನತೆ ದೂರವಾಗಿ ಶಾಂತಿ, ನೆಮ್ಮದಿ ಜೊತೆಗೆ ದೈಹಿಕ ಆರೋಗ್ಯವನ್ನು ಕೂಡ ನೀಡುತ್ತದೆ. ರಾಮನಾಮ ಜಪವು ದೇಹದಲ್ಲಿ ವಿಶೇಷವಾದ ಬಲವನ್ನು ನೀಡುತ್ತದೆ ನರಗಳಿಗೆ ಪ್ರಚೋದನೆ ನೀಡಿ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಪ್ರೇರೇಪಿಸುತ್ತದೆ. ರಾಮನಾಮ ಜಪದಿಂದ ಮನಸ್ಸು ಸದೃಢವಾಗಿ ಸ್ವತಃ ಉತ್ತಮ ನಿರ್ಧಾರವನ್ನು ತೆಗೆದುಕೊಳ್ಳುವ ಆತ್ಮಬಲ ದೊರೆಯುತ್ತದೆ. ಮನುಷ್ಯನ ಮನದಲ್ಲಿರುವ ಕೆಟ್ಟ ಭಾವನೆಗಳನ್ನು ತೊಡೆದು ರಾಮನ ಜೀವನ ಮತ್ತು ವ್ಯಕ್ತಿತ್ವದಿಂದ ಪ್ರೇರಿತರಾಗಿ ಉತ್ತಮ ಗುಣಗಳ ಉಪಾಸನೆ ಮಾಡುವ ಭಕ್ತಿ ಭಾವವೂ ಮನದಲ್ಲಿ ಮೂಡುತ್ತದೆ. ಹೀಗಾಗಿ ನಿರಂತರ ರಾಮನಾಮ ಜಪವನ್ನು ಮಾಡುವುದರಿಂದ ಮಾನಸಿಕ ಒತ್ತಡ ಚಿಂತೆಗಳು ಪರಿಹಾರವಾಗಿ ನೆಮ್ಮದಿಯ ಜೀವನ ನಮ್ಮದಾಗುತ್ತದೆ.





ಮಾಧುರಿ ದೇಶಪಾಂಡೆ, ಬೆಂಗಳೂರು

# ಶ್ರೀರಾಮ ಜಯರಾಮ ಜಯಜಯ ರಾಮ



**ರಾಮಾಯ ರಾಮಭದ್ರಾಯ**
**ರಾಮಚಂದ್ರಾಯ ವೇದಸೇ**
**ರಘುನಾಥಾಯ ನಾಥಾಯ**
**ಸೀತಾಯ ಪತಯೇ ನಮಃ**

ರಾಮನವಮಿ ಹಿಂದೂಗಳ ವಸಂತ ಹಬ್ಬವಾಗಿದ್ದು ವಿಷ್ಣುವಿನ ಏಳನೇಯ ಅವತಾರವಾದ ಭಗವಾನ್ ರಾಮನ ಜನ್ಮದಿನವನ್ನು ಆಚರಿಸಲಾಗುತ್ತದೆ. ಚೈತ್ರಮಾಸದ ಶುಕ್ಲಪಕ್ಷದ ಒಂಬತ್ತನೇಯ ದಿನದಂದು ಬರುತ್ತದೆ.

ರಾಮನವಮಿಯನ್ನು ಐದು ಪ್ರಮುಖ ಹಬ್ಬಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.ಅಯೋಧ್ಯಯ ರಾಜ ದಶರಥ ರಾಣಿ ಕೌಸಲ್ಯೆಯ ಪುತ್ರ ಭಗವಾನ್ ರಾಮನ ಜನ್ಮ ವಾರ್ಷಿಕೋತ್ಸವವನ್ನು ಗುರುತಿಸುತ್ತದೆ.ಶ್ರೀ ರಾಮಚಂದ್ರನನ್ನು ವಿಷ್ಣುವಿನ ಏಳನೇಯ ಅವತಾರವೆಂದು ಪರಿಗಣಿಸಲಾಗುತ್ತದೆ.ಈ ಶುಭದಿನದಂದು ಶ್ರೀರಾಮನ ಭಕ್ತರು ರಾಮಕಥಾ ಪಠಣ ಮತ್ತು ಶ್ರೀಮದ್ ಭಾಗವತ ಮತ್ತು ರಾಮಾಯಣದಂತಹ ಪವಿತ್ರ ಹಿಂದೂ ಗ್ರಂಥಗಳ ಶ್ಲೋಕಗಳನ್ನು ಪಠಿಸುವ ಮೂಲಕ ಈ ದಿನವನ್ನು ಆಚರಿಸುತ್ತಾರೆ.

ರಾಮನ ನೀತಿವಂತಿಕೆ,ಉತ್ತಮ ನಡುವಳಿಕೆ,ಸದ್ಗುಣಗಳ ಮೂಲಕ ಆದರ್ಶ ರಾಜ ಮತ್ತು ಮಾನವನಾಗಿರುವದರಿಂದ ಹೆಚ್ಚಾಗಿ ಹಿಂದೂಧರ್ಮದಲ್ಲಿ ಪರಿಗಣಿಸಲಾಗುತ್ತದೆ.

ರಾಮನವಮಿ ಹಬ್ಬದಂದು ಭಗವಂತನ ಪ್ರಾರ್ಥನೆಯಿಂದ ವ್ಯಕ್ತಿಯು ತನ್ನ ಜೀವನದಲ್ಲಿ ದೈವಿಕ ಶಕ್ತಿಯನ್ನು ಹೊಂದುತ್ತಾನೆ ಭೂಮಿಯಲ್ಲಿಯ ಕೆಟ್ಟ ಪ್ರಭಾವಗಳು ಅಥವಾ ನಕಾರಾತ್ಮಕ ಶಕ್ತಿಗಳು ತೆಗೆದು ಹಾಕಲಾಗುತ್ತದೆ ಎಂಬುದು ಭಕ್ತರಲ್ಲಿ ಜನಪ್ರೀಯ ನಂಬಿಕೆಯಾಗಿದೆ.



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

**ಆಚರಣೆ:** ಜನರು ರಾಮನವಮಿಯನ್ನು ವಿಭಿನ್ನ ರೀತಿಯಲ್ಲಿ ಆಚರಿಸುತ್ತಾರೆ.ಕೆಲವರು ದೇವಾಲಯಗಳಿಗೆ ಬೇಟಿನೀಡಿದರೆ ಕೆಲವರು ತಮ್ಮ ಮನೆಯಲ್ಲಿಯೇ ಹಬ್ಬ ಆಚರಿಸುತ್ತಾರೆ.ಭಕ್ತರು ದಿನವಿಡೀ ಉಪವಾಸ ಮಾಡಿ ಸೂರ್ಯೋದಯದ ಸಮಯದಲ್ಲಿ ರಾಮಕಥೆ ಪವಿತ್ರ ಹಿಂದೂ ಧರ್ಮ ಗ್ರಂಥಗಳಾದ ಭಾಗವತ,ರಾಮಾಯಣಗಳನ್ನು ಪಠಿಸಲಾಗುತ್ತದೆ.

**ಮಹತ್ವ:** ರಾಮನವಮಿಯು ಕೆಟ್ಟದ್ದರ ಮೇಲೆ ಒಳ್ಳೆಯತನದ ವಿಜಯವನ್ನು ಪ್ರತಿನಿಧಿಸುತ್ತದೆ.ನಮ್ಮ ಜೀವನಕ್ಕೆ ನಕಾರಾತ್ಮಕ ಕಂಪನ ಕಡಿಮೆಮಾಡಿ ಶುಭಸಂಧರ್ಭದ ಅರ್ಥ ತಿಳಿಸಲು ಶ್ರೀರಾಮ ಕಥೆ ಶ್ರೀಮದ್ಭಾಗವತ ಪಠಣಗಳನ್ನು ಮಾಡಲಾಗುತ್ತದೆ. ದೇವತೆಗಳು ಅಥವಾ ದೇವರು ಅವತಾರ ತಾಳಿದ ದಿನದಂದು ಭೂಮಿಯ ಮೇಲೆ ದೈವೀ ತತ್ವಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರತವಾಗಿ ರುತ್ತವೆ. ಶ್ರೀರಾಮನವಮಿಯಂದು ಶ್ರೀರಾಮನ ತತ್ವವು ಎಂದಿಗಿಂತಲೂ ಸಾವಿರಪಟ್ಟು ಹೆಚ್ಚು ಭೂಮಿಯನ್ನು ಕಾರ್ಯನಿರತವಾಗಿಡುತ್ತದೆ.ರಾಮ ಎನ್ನುವ ಎರಡು ಅಕ್ಷರಗಳಲ್ಲಿ ಮಹತ್ವಪೂರ್ಣವಾದ ಅರ್ಥವಿದೆ.'ರಾ' ಎಂದರೆ ಬೆಳಕು 'ಮ' ಎಂದರೆ ನಮ್ಮೊಳಗಿನ ದೇವಿಕ ಬೆಳಕು ಎಂಬ ಅರ್ಥ ನೀಡುತ್ತದೆ.

ರಾಮನು ನಮ್ಮ ಆತ್ಮವಾದರೆ ಸೀತಾದೇವಿಯು ನಮ್ಮ ಮನಸ್ಸು,ಹನುಮನು ಜೀವಶಕ್ತಿಯಾದರೆ ರಾವಣನು ನಮ್ಮ ಅಹಂ.ಅಹಂ ನಮ್ಮ ಮನಸ್ಸನ್ನು ಆವರಿಸಿಕೊಂಡಾಗ ನಮ್ಮ ಆತ್ಮವು ಪ್ರಕ್ಷುಬ್ಧಗೊಳ್ಳುತ್ತದೆ. ಮನಸ್ಸು ಮತ್ತು ಆತ್ಮವನ್ನು ಸಮನ್ವಯ ಗೊಳಿಸಲು ಶ್ರೀರಾಮನ ಧ್ಯಾನಮಾಡಿ ಉಸಿರಾಟದ ಮೂಲಕ ಆತ್ಮವನ್ನು ನಿಯಂತ್ರಿಸಬಹುದು.ರಾಮ ಮತ್ತು ಸೀತಾಮಾತೆ ಒಂದಾದರೆ ನಮ್ಮಲ್ಲಿರುವ ಅಹಂ ನಾಶವಾಗುತ್ತದೆ.ಸಂಭ್ರಮದಿಂದ ರಾಮಸೀತಾಮಾತೆಯನ್ನು ಭಕ್ತಿಯಿಂದ ಪೂಜಿಸಿ ಪಾನಕ,ಕೋಸಂಬರಿ ನೇವೇದ್ಯ ಮಾಡಿ ಹಬ್ಬವನ್ನು ಆಚರಿಸೋಣ.ಜೈ ಶ್ರೀರಾಮ.



ಸಿನಿಮಾ ವರದಿ: ಬಿ.ಜಿ.ರವಿಕುಮಾರ್



## ಪ್ರಥಮ್ ಅಭಿನಯದ 'ಫಸ್ಟ್ ನೈಟ್ ವಿತ್ ದೆವ್ವ " ಚಿತ್ರದ ಟ್ರೇಲರ್ ಬಿಡುಗಡೆ




### ಏಪ್ರಿಲ್ 3 ರಂದು ಚಿತ್ರ ತೆರೆಗೆ

ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ನಾಯಕನಾಗಿ ನಟಿಸಿರುವ, ಪಿ.ವಿ.ಆರ್.ಸ್ವಾಮಿ ಗೂಗಾರೆದೊಡ್ಡಿ ಅವರ ನಿರ್ದೇಶನದ ಬಹು ನಿರೀಕ್ಷಿತ "ಫಸ್ಟ್ ನೈಟ್ ವಿತ್ ದೆವ್ವ" ಚಿತ್ರ ಬಿಡುಗಡೆಗೆ ಸಿದ್ದವಾಗಿದೆ. ಏಪ್ರಿಲ್ 3 ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ನೆರವೇರಿತು. ಈ ಚಿತ್ರಕ್ಕೆ ಕಥೆ, ಚಿತ್ರಕಥೆಯನ್ನು ಕೂಡ ಪ್ರಥಮ್ ಅವರೇ ರಚಿಸಿದ್ದಾರೆ, ಇದೇ ಚಿತ್ರದಲ್ಲಿ ನಟಿಸಿರುವ ಹಿರಿಯನಟ ಶ್ರೀನಿವಾಸಮೂರ್ತಿ ಅವರು ಟ್ರೇಲರ್ ಗೆ ಚಾಲನೆ ನೀಡಿದರು.

ನಾಯಕ ಪ್ರಥಮ್ ಮಾತನಾಡುತ್ತಾ, ನಮ್ಮ ಚಿತ್ರದ ಡಬ್ಬಿಂಗ್, ಸ್ಯಾಟಲೈಟ್ ರೈಟ್ಸ್ ಉತ್ತಮ ಮೊತ್ತಕ್ಕೆ ಮಾರಾಟವಾಗಿದೆ, ಮನರಂಜನೆಯನ್ನೇ ಪ್ರಧಾನವಾಗಿಟ್ಟುಕೊಂಡು ಮಾಡಿರುವ ಹಾರರ್ ಕಾಮಿಡಿ ಚಿತ್ರವಿದು, ನಾಯಕನಿಗೆ ಮದುವೆಯಾಗುತ್ತದೆ, ಆತನಿಗೆ ತನ್ನ ಹೆಂಡತಿ ದೆವ್ವ ಎಂಬುದು ಮದುವೆಯಾದ ಕೂಡಲೇ ಗೊತ್ತಾಗುತ್ತದೆ. ನಂತರ ಆತನ ಫಸ್ಟ್ ನೈಟ್ ಆಗುತ್ತಾ ಇಲ್ವಾ ಎನ್ನುವುದೇ ನಮ್ಮ ಚಿತ್ರದ ಕಥಾಹಂದರ.

ನಾನೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದೇನೆ ಎಂದರು.

ನಿರ್ದೇಶಕ ಪಿ.ವಿ.ಆರ್. ಸ್ವಾಮಿ ಮಾತನಾಡಿ, ಪ್ರಥಮ್ ಅವರು ಒಳ್ಳೆಯ ಮಾತುಗಾರ ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಈ ಚಿತ್ರದಲ್ಲಿ ಅವರ ಪಾತ್ರಕ್ಕೆ ಮಾತು ತುಂಬಾ ಕಮ್ಮಿ. ಎಲ್ಲರ ಸಹಕಾರದಿಂದ ಒಂದೊಳ್ಳೆ ಚಿತ್ರ ನಿರ್ಮಾಣವಾಗಿದೆ. ನಾನು ಛಾಯಾಗ್ರಾಹಕನಾಗಿ ಬಹಳ ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿದ್ದೇನೆ ಈ ಚಿತ್ರಕ್ಕೂ ನಾನೇ ಛಾಯಾಗ್ರಹಣದ ಜೊತೆಗೆ ನಿರ್ದೇಶನವನ್ನೂ ಮಾಡಿದ್ದೇನೆ. ಇದು ನಾನು ಛಾಯಾಗ್ರಾಹಕನಾಗಿ ಕಾರ್ಯ ನಿರ್ವಹಿಸಿರುವ 53ನೇ ಸಿನಿಮಾ.

"ಫಸ್ಟ್ ನೈಟ್ ವಿತ್ ದೆವ್ವ" ನನ್ನ ನಿರ್ದೇಶನದ ಐದನೇ ಚಿತ್ರ. ಈ ಚಿತ್ರದಲ್ಲಿ ಮಿಮಿಕ್ರಿ ಗೋಪಿ, ತುಕಾಲಿ ಸಂತು, ಸುಶ್ಮಿತಾ ಇವರೆಲ್ಲರ ಪಾತ್ರಗಳು ಪ್ರಭಾವ ಬೀರುತ್ತದೆ ಒಟ್ಟು 30 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ ಎಂದು ತಿಳಿಸಿದರು.

ಇದು ಕಾಮಿಡಿ ಹಾರರ್ ಚಿತ್ರ, ಪ್ರಥಮ್ ಅವರ ಪತ್ನಿಯಾಗಿ ನಾನು ನಟಿಸಿದ್ದೇನೆ. ಇನ್ನೋಸೆಂಟ್ ಹುಡುಗಿಯ ಪಾತ್ರ. ನನ್ನ ಹೇಗೆ ಚೇಂಜ್ ಆಗುತ್ತಾ ಹೋಗುತ್ತದೆ ಎನ್ನುವುದೇ ವಿಶೇಷ, ಎರಡು ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ನಾಯಕಿ ನಿಖಿತಾಸ್ವಾಮಿ ಹೇಳಿದರು,

ಹಿರಿಯನಟ ಶ್ರೀನಿವಾಸಮೂರ್ತಿ ಮಾತನಾಡಿ, ನಾನು ಅಣ್ಣಾವ್ರ ಕಾಲದ ನಟರ ಜತೆಗೂ ನಟಿಸಿದ್ದೇನೆ. ಈಗಿನ ಕಾಲದ ನಟರ ಜತೆಗೂ ನಟಿಸಿದ್ದೇನೆ ನನಗೆ ಅಂಥಾ ಬದಲಾವಣೆ ಏನೂ ಕಾಣಿಸುತ್ತಿಲ್ಲ ಎಂದು ಹೇಳಿದರು. ಮಿಮಿಕ್ರಿ ಗೋಪಿ ಮಾತನಾಡಿ ಪ್ರಥಮ್ ಹಾಗೂ ಸ್ವಾಮಿ ಇಬ್ಬರೂ ಸೇರಿ ನನ್ನಿಂದ ಬೆಳಗಿನ ಜಾವದವರೆಗೂ ಕೆಲಸ ಮಾಡಿಸಿದ್ದಾರೆ, ಮಿಮಿಕ್ರಿ ಕೂಡ ಮಾಡಿಸಿದ್ದಾರೆ ಎಂದು ಹೇಳಿದರು,

ಅದ್ವಿಕ್ ವರ್ಮ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಚಿತ್ರದ ಹಾಡುಗಳನ್ನು ಪ್ರೇಕ್ಷಕರು ಇಷ್ಟಪಟ್ಟಿದ್ದಾರೆ, ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದೆ. ಹರೀಶ್‌ರಾಜ್ ಅವರದು ವಿಲನ್ ಪಾತ್ರವಾದರೂ ಸ್ಪೆಷಲ್ ಆಗಿದೆ. ಸುಶ್ಮಿತಾ, ಜೀವಿತಾ, ಶ್ರೀನಿವಾಸಮೂರ್ತಿ, ರಮೇಶ್ ಭಟ್, ತುಕಾಲಿ ಸಂತೋಷ್ ಇವರೆಲ್ಲ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ನವೀನ್, ಪುನೀತ್ ಕಾರ್ಯನಿರ್ವಹಿಸಿದ್ದಾರೆ. "ಫಸ್ಟ್ ನೈಟ್ ವಿತ್ ದೆವ್ವ" ಚಿತ್ರದಲ್ಲಿ ನಟ ತುಕಾಲಿ ಸಂತೋಷ್ ಅಬ್ರಾಡ್‌ನಿಂದ ಬಂದ ಹುಡುಗನ ಪಾತ್ರ ಮಾಡಿದ್ದಾರೆ. ನಾಯಕನ ಜೊತೆಗೆ ಸಾಗುವ ಪಾತ್ರವದು, ನಟಿ ಸುಶ್ಮಿತಾ ಇಲ್ಲಿ ದೆವ್ವದ ರೂಪದಲ್ಲಿ ಕಾಣಿಸಿಕೊಂಡಿದ್ದಾರೆ, ನಾಗೇಶ್ ನಾರಾಯಣ್ ಅವರು ಸಂಕಲನಕಾರ್ಯ ನಿರ್ವಹಿಸುವ ಜತೆಗೆ ಸಂಭಾಷಣೆಯನ್ನೂ ಬರೆದಿದ್ದಾರೆ. ಚಿತ್ರದಲ್ಲಿ ಎರಡು ಸಾಹಸ ಸನ್ನಿವೇಶಗಳಿದ್ದು, ಥ್ರಿಲ್ಲರ್ ಮಂಜು ಸಾಹಸ ಸಂಯೋಜನೆ ಮಾಡಿದ್ದಾರೆ.




## ದೈಜಿ - ಇದು ರಮೇಶ್ ಅರವಿಂದ್ ರ 109 ನೇ ಚಿತ್ರ

ಇದರಲ್ಲಿ ನಾಯಕಿ ನಟಿಯಾಗಿ ರಾಧಿಕಾ ನಾರಾಯಣ್ ಕಾಣಿಸಿಕೊಳ್ಳುತ್ತಿದ್ದಾರೆ ಹಾಗೂ ಅನೇಕ ವಿದೇಶಿ ಕಲಾವಿದರುಗಳು ಇದರಲ್ಲಿ ನಟಿಸಿದ್ದಾರೆ. ದಿಗಂತ್ ರವರು ಕೂಡ ಒಂದು ಮಹತ್ವವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರವನ್ನು ನಿರ್ದೇಶಿಸಿರುವವರು ಶಿವಾಜಿ ಸೂರತ್ಕಲ್ 1 ಹಾಗೂ 2 ಚಿತ್ರದ ನಿರ್ದೇಶಕರಾದ ಆಕಾಶ್ ಶ್ರೀವತ್ಸ ರವರು ಹಾಗೂ ಇದರ ನಿರ್ಮಾಪಕರು ರವಿ ಕಶ್ಯಪ್ ರವರು. ರವಿ ಕಶ್ಯಪ್ ರವರ ಜೀವನದಲ್ಲಿ ನಡೆದ ನೈಜ ಘಟನೆಗಳನ್ನು ಆಧಾರವಾಗಿ ಇಟ್ಟುಕೊಂಡು ಅದಕ್ಕೆ ಚಿತ್ರಕಥೆ ಬರೆದು ಆಕಾಶ್ ಶ್ರೀವತ್ಸ ರವರು ಇದನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣವು ಸಂಪೂರ್ಣ ವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದ ವಿ. ಎಫ್.ಎಕ್ಸ್. , ರೀ ರೆಕಾರ್ಡಿಂಗ್, ಕೆಲಸಗಳು ನಡೆಯುತ್ತಿದ್ದು ಇನ್ನೇನು ಕೆಲವೇ ತಿಂಗಳುಗಳಲ್ಲಿ ತೆರೆಗೆ ಬರಲಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ಮುಗಿಯುತ್ತಿದ್ದಂತೆ ಚಿತ್ರದ ಬಿಡುಗಡೆ ದಿನಾಂಕವನ್ನು ಚಿತ್ರ ತಂಡ ಬಹಿರಂಗ ಪಡಿಸಲಿದ್ದಾರೆ. ಈ ಚಿತ್ರಕ್ಕೆ ಛಾಯಾಗ್ರಹಣ ವನ್ನು ಶ್ರೀಶ ಕೂದುವಳ್ಳಿ ಯವರು ಮಾಡಿದ್ದು, ಹಿನ್ನೆಲೆ ಸಂಗೀತ vannu ಜೂಡಾ ಸ್ಯಾಂಡಿ ರವರು ಮಾಡುತ್ತಿದ್ದಾರೆ. ಈ ಚಿತ್ರದ ವಿಶೇಷತೆ ಎಂದರೆ ದೇಶ ವಿದೇಶದ ಅನೇಕ ಜಾಗದಲ್ಲಿ ಚಿತ್ರೀಕರಣವಾಗಿದೆ – ಇಂಗ್ಲೆಂಡ್ ನ ಬಾರ್ನೌಮ್ಮತ್, ಸ್ಕಾಟ್ ಲ್ಯಾಂಡ್ ನ ಎಡಿನ್ಬರೋ ನಲ್ಲಿ, ವಾರಣಾಸಿ, ಸಕಲೇಶಪುರ, ಮಡಿಕೇರಿ, ಬೆಂಗಳೂರಿನಲ್ಲಿ ಹೀಗೆ ಸಾಕಷ್ಟು ಬೇರೆ ಬೇರೆ ತಾಣದಲ್ಲಿ ಚಿತ್ರಿತ ವಾಗಿದೆ. ಇದೊಂದು ವಿಭಿನ್ನ ಶೈಲಿಯ ಚಿತ್ರವಾಗಿ ಮೂಡಿಬಂದಿದೆ.

## ತಿಕ್ಲು ರಾಮನಿಗೆ ಹನುಮನಾಗಿ ಜಹಾಂಗೀರ್ ಸಾಥ್

ತಿಕ್ಲು ರಾಮ ಸಿನಿಮಾದ ಚಿತ್ರೀಕರಣವು ಹಾಸನ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಶ್ರಾವ್ಯ ಕಂಬೈನ್ಸ್ ಮತ್ತು ಕರಿಷ್ಮಾ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಶೃತಿ.ಜಿ.ಬಿ ಮತ್ತು ಕೋಮಲ ನಟರಾಜು ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಮಂಜುಕವಿ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುವ ಜತೆಗೆ ಪ್ರೇಕ್ಷಕರ ಹೃದಯಕ್ಕೆ ಹತ್ತಿರವಾಗುವ ನಾಲ್ಕು ಹಾಡುಗಳಿಗೆ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಇನ್ನು ಹನುಮನ ಪಾತ್ರದಲ್ಲಿ ಜಹಾಂಗೀರ್ ಆಗಮನ ಸಿನಿಮಾಕ್ಕೆ ಕಳೆ ಬಂದಿದೆ ಅಂತ ನಿರ್ದೇಶಕರು ಸಂತಸ ವ್ಯಕ್ತಪಡಿಸಿದ್ದಾರೆ.

ತಾರಾಗಣದಲ್ಲಿ ಡಾ.ರಾಜ್‌ವೀರ್, ಚೈತ್ರ ರಾಮ್, ಸುಚೇಂದ್ರ ಪ್ರಸಾದ್ ಇವರೊಂದಿಗೆ ವಿನೋದ್ ಪವಿತ್ರ, ಮಧು ಭೈರಪ್ಪ, ಶ್ರಾವ್ಯ ಸೇರಿದಂತೆ ಅನೇಕ ಹೆಸರಾಂತ ಕಲಾವಿದರು ಅಭಿನಯಿಸುತ್ತಿದ್ದಾರೆ. ಹಿನ್ನಲೆ ಸಂಗೀತ ವಿನು ಮನಸು, ಛಾಯಾಗ್ರಹಣ ರಾಜ್ ಕಡೂರು, ಸಂಕಲನ ವೆಂಕಿ.ಯುಡಿವಿ, ಸಾಹಸ ಅಲ್ಟಿಮೇಟ್ ಶಿವು, ನೃತ್ಯ ಜಗ್ಗು ಅವರದಾಗಿದೆ. ಚಿತ್ರವು ಮೊದಲರ್ಧ ಹಳ್ಳಿ ಸೊಗಡು ಇರಲಿದ್ದು, ದ್ವಿತೀಯಾರ್ಧ ನೋಡುಗರನ್ನು ಬೇರೆ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಪರಿಸರ, ಸಾಮಾಜಿಕ ಕಳಕಳಿ, ಸಂಸಾರ ನಡೆಸುವ ಹೆಣ್ಣು ಮಕ್ಕಳಿಗೆ ಒಂದಾಗಿ ಬಾಳುವಂತ ಸನ್ನಿವೇಶಗಳು ಇರಲಿದೆ. ಸತ್ಯ ಘಟನೆಯಲ್ಲಿ ಆತ ಶ್ರೀರಾಮ. ಮುಂದೆ ತಿಕ್ಲು ರಾಮ ಆಗುವುದಕ್ಕೆ ಕಾರಣ ಏನು? ಸೈಲೆಂಟ್ ಆಗಿದ್ದರೆ ರಾಮ, ಕೊಡಲಿ ಹಿಡಿದರೆ ತಿಕ್ಲು ರಾಮ. ಹಾಗಂತ ರಕ್ತಪಾತವನ್ನು ವೈಭವಿಕರಿಸುವುದಿಲ್ಲ.




## 'ಆಹನ' ವಿಭಿನ್ನ ಆಲ್ಬಂ ಬಂತು

ಕನ್ನಡದ ಸ್ವತಂತ್ರ ಸಂಗೀತ ಕ್ಷೇತ್ರದಲ್ಲಿ ಹೊಸ ಅಲೆ ಮೂಡಿಸುವ ಉದ್ದೇಶದಿಂದ ವೈಷ್ಣವಿ ಫಿಲಂಸ್ 'ಆಹನ' ಎಂಬ ವಿಭಿನ್ನ ಆಲ್ಬಂ ಹಾಡನ್ನು ಸಿದ್ಧಪಡಿಸಿದೆ. ಭಾವನಾತ್ಮಕ ಕಥೆ ಮತ್ತು ವಿನೂತನ ಸಂಗೀತದ ಸಮ್ಮಿಲನವೇ ಈ ಪ್ರಾಜೆಕ್ಟ್.

ವಿಜಯ್ ಲೋಹಿತ್ (ವೈಷ್ಣವಿ ಫಿಲಂಸ್) ನಿರ್ಮಾಣ ಹಾಗೂ ಸತೀಶ್ ಹೆಚ್ ಗೌಡ ಅವರ ಸಹ ನಿರ್ಮಾಣವಿರುವ ಈ ಆಲ್ಬಂಗೆ ರಜತ್ ಹೆಗಡೆ ಸಂಗೀತ ಸಂಯೋಜಿಸಿದ್ದಾರೆ.

ಈ ಯೋಜನೆಯ ವಿಶೇಷತೆ ಎಂದರೆ, ಪ್ರತಿಭಾವಂತ ಕಲಾವಿದ ರಜತ್ ಹೆಗಡೆ ಅವರು ಈ ಹಾಡಿಗೆ ಕೇವಲ ಸಂಗೀತ ಸಂಯೋಜನೆ ಮಾಡಿರುವುದ್ದಲ್ಲದೆ, ಅವರೇ ಗಾಯಕರಾಗಿ ಧ್ವನಿ ನೀಡಿದ್ದಾರೆ. ಅಷ್ಟೇ ಅಲ್ಲದೆ, ವಿಡಿಯೋದಲ್ಲಿ ನಾಯಕ ನಟನಾಗಿಯೂ ಕಾಣಿಸಿಕೊಳ್ಳುವ ಮೂಲಕ ಈ ಭಾವನಾತ್ಮಕ ಪ್ರಯಾಣಕ್ಕೆ ಜೀವ ತುಂಬಿದ್ದಾರೆ.

'ಆಹನ' ಒಬ್ಬ ಕಲಾವಿದ ಮತ್ತು ಸಂಗೀತದ ನಡುವಿನ ಸಂಬಂಧವನ್ನು ಅನಾವರಣಗೊಳಿಸುತ್ತದೆ.



"ಒಬ್ಬ ಕಲಾವಿದ ಸಂಗೀತವನ್ನು ತಲುಪಲು ಹಾತೊರೆಯುತ್ತಿರುವಾಗ, ಸಂಗೀತವೇ ಅವನನ್ನು ನಿರಾಕರಿಸಿದರೆ ಏನಾಗಬಹುದು?" ಎನ್ನುವ ಆಳವಾದ ಪ್ರಶ್ನೆಯೇ ಈ ಹಾಡಿನ ಜೀವಾಳ. ಈ ಕಥೆಯು ರಜತ್ ಹೆಗಡೆ ಅವರ ಸ್ವಂತ ಸೃಜನಾತ್ಮಕ ಅನುಭವಗಳಿಂದ ಮೂಡಿಬಂದಿರುವುದರಿಂದ, ಅವರ ಅಭಿನಯ ಮತ್ತು ಸಂಗೀತದಲ್ಲಿ ಒಂದು ವಿಶೇಷವಾದ ಆಪ್ತತೆ ಇದೆ. 'ಆಹನ' ಎಂದರೆ "ಸೂರ್ಯನ ಮೊದಲ ಕಿರಣ". ಇದು ಜಾಗೃತಿ, ಭರವಸೆ ಮತ್ತು ಹೊಸ ಆರಂಭವನ್ನು ಸೂಚಿಸುತ್ತದೆ.

ನಾರಾಯಣ ಶರ್ಮ ಅವರು ಈ ಹಾಡಿಗೆ ವಿಶಿಷ್ಟವಾದ 'ರೆಟ್ರೋ–ಮೋಡರ್ನ್' ಶಬ್ದ ನೀಡಿದ್ದಾರೆ. ಆಲ್ಬಂ ನ ವಿಶೇಷವೆಂದರೆ

ಭಾರತೀಯ ಶಾಸ್ತ್ರೀಯ ಸಂಗೀತದ ತಂಬೂರಿಯನ್ನು ಆಧುನಿಕ ಸಿಂತ್ (ಖಥಿಟಿಣಜ) ಮ್ಯೂಸಿಕ್ ಜೊತೆ ಸಮರ್ಥವಾಗಿ ಬೆರೆಸಲಾಗಿದೆ. ಕಂಠೀರವ ಸ್ಟುಡಿಯೋದಲ್ಲಿ ಕೇವಲ 14 ಗಂಟೆಗಳ ಅವಧಿಯಲ್ಲಿ ಬೃಹತ್ ಸೆಟ್‌ಗಳನ್ನು ನಿರ್ಮಿಸಿ ಈ ಹಾಡನ್ನು ಚಿತ್ರೀಕರಿಸಿರುವುದು ಮತ್ತೊಂದು ವಿಶೇಷ. "ಪ್ರಸ್ತುತ ಕನ್ನಡದಲ್ಲಿ ಸ್ವತಂತ್ರ ಸಂಗೀತ ಆಲ್ಬಂಗಳು ಬರುತ್ತಿರುವುದು ಕಡಿಮೆ. ರಜತ್ ಹೆಗಡೆ ಅವರಂತಹ ಬಹುಮುಖ ಪ್ರತಿಭೆಗಳ ಮೂಲಕ ನಾವು ಹೊಸ ಆಲೋಚನೆಗಳನ್ನು ಪ್ರೇಕ್ಷಕರಿಗೆ ತಲುಪಿಸಲು ಬಯಸಿದ್ದೇವೆ. ಹೊಸಬರಿಗೆ ವೇದಿಕೆ ಕಲ್ಪಿಸುವುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ." ಎಂದು ನಿರ್ಮಾಪಕರ ಮಾತು ವೈಷ್ಣವಿ ಫಿಲಂಸ್ ನ ನಿರ್ಮಾಪಕ ವಿಜಯ್ ಲೋಹಿತ್ ತಿಳಿಸಿದ್ದಾರೆ.

## ಶಿಲ್ಪಾ ಶ್ರೀನಿವಾಸ್ ಚಿತ್ರದಲ್ಲಿ ಹಿರಿಯ ನಟ ಅಭಿಜಿತ್



ಸ್ನೇಹಾಲಯಂ ಕ್ರಿಯೇಷನ್ಸ್ ಲಾಂಛನದಲ್ಲಿ ಅಹಿನಾ ಮನೋ ಹಾಗು ಮಂಜುನಾಥ್ ಗೌರಜ್ಜಿ ನಿರ್ಮಿಸುತ್ತಿರುವ ಶಿಲ್ಪಾ ಶ್ರೀನಿವಾಸ್ ಚಿತ್ರದ ಸ್ಪೆಷಲ್ ಹಾಡಲ್ಲಿ ಹಿರಿಯ ನಟ ಅಭಿಜಿತ್ ಹೆಜ್ಜೆ ಹಾಕಲಿದ್ದಾರೆ.

"ಈ ಸಿನಿಮಾ ಅಂತೀವಲ್ಲಾ ಅದು ದೊಡ್ಡ"

ಎಂಬ ಸಾಲುಗಳಿಂದ ಪ್ರಾರಂಭವಾಗುವ ಪ್ರತಾಪ್ ಭಟ್ ಅವರ ಸಾಹಿತ್ಯಕ್ಕೆ ಅನಿರುದ್ಧ ಶಾಸ್ತ್ರಿ ಸಂಗೀತ ಸಂಯೋಜನೆ ಮಾಡುವ ಜೊತೆಗೆ ಅವರೇ ಹಾಡಿದ್ದಾರೆ.

ಹಾರರ್ , ಥ್ರಿಲ್ಲರ್ ಜೊತೆಗೆ ಸಿನಿಮಾ ಇಂಡಸ್ಟ್ರಿಯಲ್ಲಿನ ಹುಳುಕು ತೊಡಕುಗಳನ್ನ ಎತ್ತಿ ತೋರಿಸುವ ಕಥಾವಸ್ತುವನ್ನು ಒಳಗೊಂಡಿರುವ ಶಿಲ್ಪಾ ಶ್ರೀನಿವಾಸ್ ಈಗಾಗಲೇ ತನ್ನ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡು ಸೆನ್ಸಾರ್ ಹಂತದಲ್ಲಿದೆ. ಫಸ್ಟ್ ಕಾಪಿ ನೋಡಿದ ನಿರ್ದೇಶಕರಿಗೆ ಇನ್ನೂ ಒಂದು ಹಾಡು ಇದ್ದಿದ್ರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದನಿಸಿದೆ. ಹಾಗಾಗಿ ನಿರ್ದೇಶಕ ರಾಜೀವ್ ಕೃಷ್ಣ ಅವರು ಹೊಸ ಹಾಡನ್ನು ಸಿದ್ದಪಡಿಸಿ ಅದರಲ್ಲಿ ನಟ ಅಭಿಜಿತ್ ಅವರಿಂದ ಹೆಜ್ಜೆ ಹಾಕಿಸುತ್ತಿದ್ದಾರೆ.

ಈಗ ಶಿಲ್ಪಾ ಶ್ರೀನಿವಾಸ್ ಚಿತ್ರದಲ್ಲಿ ಒಟ್ಟು ಮೂರು ಹಾಡುಗಳು ಹಾಗೂ ಎರಡು ಫೈಟ್ ಗಳಿದ್ದು ಮೇ ತಿಂಗಳ ಕೊನೆಯಲ್ಲಿ ಚಿತ್ರವನ್ನು ಬಿಡುಗಡೆ ಮಾಡಬೇಕೆಂಬ ಯೋಜನೆಯನ್ನು ನಿರ್ದೇಶಕರು ಹಾಕಿಕೊಂಡಿದ್ದಾರೆ. ಈ ಚಿತ್ರದಲ್ಲಿ ನಿರ್ಮಾಪಕರು, ವಿತರಕರೂ ಆದ ಶಿಲ್ಪಾ ಶ್ರೀನಿವಾಸ್ ಅವರೇ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಉಳಿದಂತೆ ಶೋಭರಾಜ್, ನಾಗೇಂದ್ರ ಅರಸ್, ಶಂಖನಾದ ಆಂಜಿನಪ್ಪ,, ಅನ್ನಪೂರ್ಣ, ನಂದಿನಿ ಕಮ್ಮಯ್ಯ. ಪಂಚಾಕ್ಷರಯ್ಯ ಮರಿಸ್ವಾಮಿ, ವೀರ ಧನುಷ್.

ಕಿಶೋರ್ ಕಾಸರಗೋಡು, ಸ್ವಾತಿ ಲಿಂಗರಾಜ್, ಬೆಂಗಳೂರು ಮನು, ಪ್ರಿಯ ಮುಂತಾದವರು ನಟಿಸಿದ್ದಾರೆ. ಈ ಚಿತ್ರಕ್ಕೆ ಪ್ರಮೋದ್ ಭಾರತೀಯ ಅವರ ಛಾಯಾಗ್ರಹಣ, ಅನಿರುದ್ಧ ಶಾಸ್ತ್ರಿ ಅವರ ಸಂಗೀತ, ಪ್ರತಾಪ್ ಭಟ್ ಅವ ಸಾಹಿತ್ಯ, ಕೆ. ಮಲ್ಲಿ ವಡ್ಡರಹಟ್ಟಿ ಅವರ ಸಹ ನಿರ್ದೇಶನ, ಡಿ ಮಲ್ಲಿ ಅವರ ಸಂಕಲನ.

ಸಾನ್ವಿ ಅವರ ನೃತ್ಯ ನಿರ್ದೇಶನ ಇರುವ ಶಿಲ್ಪಾ ಶ್ರೀನಿವಾಸ್ ಚಿತ್ರಕ್ಕೆ ರಾಜೀವ್ ಕೃಷ್ಣ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

## ಮೊದಲ ಹಂತದ ಚಿತ್ರೀಕರಣ ಮುಗಿಸಿದ 'ದೇವಿ ಮಹಾತ್ಮೆ' ಸಿನಿಮಾ

ದೇವಿ ಮಹಾತ್ಮೆ ಸಿನಿಮಾದ ಫಸ್ಟ್ ಶೆಡ್ಯುಲ್ಡ್ ಕಂಪ್ಲೀಟ್ ಕುಂದಾಪುರ ಸುತ್ತಮುತ್ತ ಮೊದಲ ಹಂತದ ಚಿತ್ರೀಕರಣ ಮುಗಿಸಿದ ದೇವಿ ಮಹಾತ್ಮೆ ಸಿನಿಮಾ ತಂಡ ಉಡುಪಿ ಜಿಲ್ಲೆಯ ಕಮಲಶಿಲೆಯ ಬ್ರಹ್ಮಿ ದೇಗುಲದಲ್ಲಿ ಮುಹೂರ್ತ ನೆರವೇರಿಸಿದ್ದ ದೇವಿ ಮಹಾತ್ಮೆ ಸಿನಿಮಾ ತಂಡ ಇದೀಗ ಮೊದಲ ಹಂತದ ಶೂಟಿಂಗ್ ಮುಕ್ತಾಯಗೊಳಿಸಿದೆ. ಕುಂದಾಪುರ ಸುತ್ತಮುತ್ತ ಸುಂದರ ಜಾಗದಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಶೀಘ್ರದಲ್ಲೇ ಚಿತ್ರತಂಡ ಸೆಕೆಂಡ್ ಶೆಡ್ಯುಲ್ಡ್ ಶೂಟಿಂಗ್ ಆರಂಭಿಸಲಿದೆ.

ಅಂದಹಾಗೇ ಇದು ನಿರ್ದೇಶಕ ನಾಗರಾಜ್ ಸೋಮಯಾಜಿ ಹೊಸ ಸಿನಿಮಾ. ಈ ಹಿಂದೆ ಫ್ಯಾಮಿಲಿ ಆಡಿಯನ್ಸ್ ಗಾಗಿ ಮರ್ಯಾದೆ ಪ್ರಶ್ನೆ ಸಿನಿಮಾ ಕಥೆ ಉಣಬಡಿಸಿದ್ದ ಅವರೀಗ ದೇವಿ ಮಹಾತ್ಮೆ ಚಿತ್ರದ ಮೂಲಕ ಕಾಮಿಡಿ ಥ್ರಿಲ್ಲರ್ ಕಥೆ ಹೇಳೋದಿಕ್ಕೆ ಹೊರಟಿದ್ದಾರೆ.

ಮೊದಲ ಹಂತದ ಚಿತ್ರೀಕರಣ ಮುಕ್ತಾಯಗೊಂಡಿರುವ ಬಗ್ಗೆ ಅನಿಸಿಕೆ ಹಂಚಿಕೊಂಡಿರುವ ನಾಗರಾಜ್ ಸೋಮಯಾಜಿ, "ಬಿಸಿಲಲ್ಲಿ ಕೆಲಸ ಮಾಡುವುದು ಸಾಹಸ. ಅದರಲ್ಲಿಯೂ ಕುಂದಾಪುರ ಬಿಸಿಲು ಝಳದಲ್ಲಿ ಇಡೀ ತಂಡ ಉತ್ಸಹದಿಂದ ಕೆಲಸ ಮಾಡಿದೆ. ಕಡಿಮೆ ತಾಂತ್ರಿಕ ವರ್ಗದೊಂದಿಗೆ ನಿರ್ಮಾಪಕರಿಗೆ ಹೊರೆಯಾಗದಂತೆ ಚಿತ್ರೀಕರಣ ನಡೆಸಲಾಗಿದೆ. ಇನ್ನೂ, ನಿರ್ಮಾಪಕ ಗಾಂಧಿರಾಜನ್ ಕನ್ನಡ ಸಿನಿಮಾ ಬಗ್ಗೆ ತುಂಬಾನೇ ಆಸಕ್ತಿ ಇದ್ದು, ಖುಷಿಯಿಂದ ಶೂಟಿಂಗ್ ಸೆಟ್ ಗೆ ವಿಸಿಟ್ ಹಾಕಿದ್ದರು" ಎಂದರು.

ದೇವಿ ಮಹಾತ್ಮೆ ಕಾಮಿಡಿ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ನಾಗರಾಜ ಸೋಮಯಾಜಿ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಲೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಜೊತೆಯಾಗಿದ್ದಾರೆ.

ಯುವಿಜಿ ಸ್ಟುಡಿಯೋ ಬ್ಯಾನರ್ ನಡಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡಲಿದ್ದಾರೆ. ಗಾಂಧಿರಾಜನ್ ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. ಎಸ್ ಕೆ ರಾವ್ ಛಾಯಾಗ್ರಹಣ ಹಾಗೂ ಲಿಕಿತ್ ಪ್ರಸಾದ್ ಕೆ ಶೆಟ್ಟಿ ಸಂಗೀತ ನಿರ್ದೇಶನ ದೇವಿ ಮಹಾತ್ಮೆಗೆ ಇರಲಿದೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,